## ಶನಿವಾರ, ೨೫ನೇ ಜನವರಿ, ೧೯೪೭

ಭಾರತ ಸಂವಿಧಾನ ಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಬೆಳಗ್ಗೆ ೧೧ ಘಂಟೆಗೆ ಸಮಾವೇಶಗೊಂಡಿತು. ರಾಷ್ಟ್ರಪತಿ [ಗೌರವಾನ್ವಿತ ಡಾ। ರಾಜೇಂದ್ರ ಪ್ರಸಾದ್] ಸಭೆಯ ಅಧ್ಯಕ್ಷತೆ ವಹಿಸಿದ್ದರು.

### ಉಪಾಧ್ಯಕ್ಷರ ಚುನಾವಣೆ

**ಸನ್ಮಾನ್ಯ ಅಧ್ಯಕ್ಷರು :** ಉಪಾಧ್ಯಕ್ಷರ ಸ್ಥಾನಕ್ಕೆ ಮಾನ್ಯತೆ ಪಡೆದು ನಾಮನಿರ್ದೇಶಿತರಾದ ಏಕೈಕ ಅಭ್ಯರ್ಥಿ ಡಾ। ಎಚ್.ಸಿ. ಮುಖರ್ಜಿ. ಅದರಂತೆ ನಾನು, ಅವರನ್ನು ಕ್ರಮಬದ್ಧವಾಗಿ ಚುನಾಯಿತರಾಗಿರುವುದಾಗಿ ಘೋಷಿಸುತ್ತೇನೆ.

**ಡಾ। ಪಟ್ಟಾಭಿ ಸೀತಾರಾಮಯ್ಯ** (ಮದರಾಸು : ಸಾಮಾನ್ಯ)*

*[ಸನ್ಮಾನ್ಯ ಅಧ್ಯಕ್ಷರೆ, ನನ್ನ ಪ್ರಸ್ತಾವವನ್ನು ಮೊದಲು ಇಂಗ್ಲಿಷ್‌ನಲ್ಲಿ ಓದುತ್ತೇನೆ]*

ಈ ಸಭೆಯ ನಿರ್ಣಯದಂತೆ–

೧. ಗೌರವಾನ್ವಿತ ಎನ್. ಗೋಪಾಲಸ್ವಾಮಿ ಅಯ್ಯಂಗಾರ್

೨. ಮಾನ್ಯ ಕೆ.ಎಂ. ಮುನ್ಷಿ ಮತ್ತು

೩. ಶ್ರೀ ಬಿಶ್ವನಾಥ್ ದಾಸ್ ಅವರನ್ನು ಒಳಗೊಂಡ ಸಮಿತಿಯನ್ನು ನೇಮಕ ಮಾಡಲಾಗುವುದು. ಇಡೀ ಭಾರತ ದೇಶದ ಸಂವಿಧಾನ ರಚನೆಗೆ ತೊಡಗುವಲ್ಲಿ ಸಭೆಯ ವ್ಯವಹಾರಗಳ ಕ್ರಮಾದೇಶಕ್ಕೆ ಸಮಿತಿಯು ಶಿಫಾರಸು ಮಾಡುವುದು. ಸಭೆಯ ಈ ಪ್ರಾರಂಭಿಕ ಸಮಾವೇಶದ ಮುಂದಿನ ಅಧಿವೇಶನದೊಳಗೆ ತನ್ನ ವರದಿಯನ್ನು ಸಲ್ಲಿಸುವುದು.

*[ನಾನು ತಮಗೆ ನಿಲುವಳಿಯನ್ನು ಹಿಂದೂಸ್ತಾನಿಯಲ್ಲಿ ವಿವರಿಸುತ್ತೇನೆ. ಮೂವರು ಹಿರಿಯರನ್ನೊಳಗೊಂಡ ಸಮಿತಿಯನ್ನು ನೇಮಕ ಮಾಡುವುದು ಪ್ರಸ್ತಾವದ ಉದ್ದೇಶ. ಈ ಸಭೆಯ ವ್ಯವಹಾರಗಳ ಕ್ರಮಾದೇಶವನ್ನು ಪರಿಶೀಲಿಸಿ, ಶಿಫಾರಸು ಮಾಡುವುದು ಸಮಿತಿಯ ಪ್ರಕಾರ್ಯ. ಸಭೆಯ ಮುಂದಿನ ಅಧಿವೇಶನ ಪ್ರಾರಂಭವಾಗುವುದರೊಳಗೆ ಸಮಿತಿಯು ತನ್ನ ವರದಿಯನ್ನು ಸಲ್ಲಿಸಬೇಕು.

ಪ್ರಸ್ತಾವ ಅತ್ಯಂತ ಸಾಧಾರಣ ಸ್ವರೂಪದ್ದೆಂದು ತೋರುತ್ತದೆ. ಆದರೆ ಅದು ಬಹಳ ಮುಖ್ಯವಾದುದು. ನಮ್ಮ ಯಾನ ಭಾಗಶಃ ನಡೆದಿದೆ. ಒಬ್ಬ ಪಯಣಿಗನ ಯಾನವನ್ನು ಊಹಿಸಿ ನೋಡಿ; ಅದರ ಮೊದಲ ಹಂತವನ್ನು ಕ್ರಮಿಸುವುದು ಸುಲಭ. ಎರಡನೆ ಹಂತದ ಪ್ರಯಾಣಕ್ಕೆ ತೊಡಗಿದಾಗ, ಅನೇಕ ತೊಡಕುಗಳನ್ನು ತೊಂದರೆಗಳನ್ನು ಎದುರುಗೊಳ್ಳುತ್ತಾನೆ. ಈಗ ಅವನಿಗೆ ಉತ್ತಮವಾದ ದಾರಿ ಯಾವುದು? ಅವನು ತನ್ನ ಪ್ರಯಾಣವನ್ನು ಮುಂದೂಡಿ, ಮುಂದೆ ತನಗೆ ಎಡತಾಕಲಿರುವ ತೊಂದರೆಗಳ ತಿಳಿವಳಿಕೆ ಪಡೆಯಲು, ತನ್ನ ನಾಯಕವರ್ಗವನ್ನು ಕಳುಹಿಸುತ್ತಾನೆ. ನಾವು ಈಗ ಮಾಡಲಿಚ್ಛಿಸಿರುವುದೂ ಅದೇ. ನಮ್ಮ ವ್ಯವಹಾರದಲ್ಲಿ ಮುಂದೊಡಗುವುದು ಹೇಗೆಂಬುದನ್ನು ಮಾರ್ಗದರ್ಶನ ನೀಡಲು ಸಮಿತಿಯೊಂದನ್ನು ರಚಿಸಲು ಬಯಸುತ್ತೇನೆ. ಪ್ರಾಯಶಃ ನಿನ್ನೆ ನೇಮಕಗೊಂಡ ಸಲಹಾ ಸಮಿತಿಯ ಬಗ್ಗೆ ತಮಗೆ ನೆನಪಿರಬೇಕು. ನಾವಿಂದು ಮತ್ತೊಂದು ಸಮಿತಿಯನ್ನು ರಚಿಸಲಿದ್ದೇವೆ. ಈ ಸಮಿತಿಯ ನೆರವಿನಿಂದ, ಸಭೆಯ ಮುಂದಿನ ವ್ಯವಹಾರಗಳ

ಕ್ರಮಾದೇಶವೇನೆಂಬುದು ನಮಗೆ ತಿಳಿದಿರಬೇಕು. ಇವೇ ಮಾತುಗಳಿಂದ, ನಾನು ನಿಮ್ಮ ಮುಂದೆ ನಿಲುವಳಿಯನ್ನು ಪ್ರಸ್ತಾವಿಸುತ್ತಿದ್ದೇನೆ. ಇನ್ನೇನೂ ಹೆಚ್ಚಿಗೆ ಹೇಳುವ ಅಗತ್ಯವಿಲ್ಲ]*

**ಬಿ. ಗೋಪಾಲ ರೆಡ್ಡಿ :** *[ನಾನು ನಿಲುವಳಿಯನ್ನು ಅನುಮೋದಿಸುತ್ತೇನೆ]*

**ಸನ್ಮಾನ್ಯ ಅಧ್ಯಕ್ಷರು :** ಇದರ ಬಗ್ಗೆ ಯಾರಾದರೂ ಮಾತನಾಡಲು ಇಚ್ಛಿಸುತ್ತಾರೆಯೆ"?

**ಡಾ। ಬಿ. ಪಟ್ಟಾಭಿ ಸೀತಾರಾಮಯ್ಯ :** ಮಾನ್ಯರೆ, ಇದಕ್ಕೊಂದು ಸಣ್ಣ ತಿದ್ದುಪಡಿ ಇದೆ ಸರ್.

**ಸನ್ಮಾನ್ಯ ಅಧ್ಯಕ್ಷರು :** ಮಾನ್ಯ ಸತ್ಯನಾರಾಯಣ ಸಿನ್ಹಾ ಅವರು ಒಂದು ತಿದ್ದುಪಡಿಗೆ ನೋಟೀಸು ಕೊಟ್ಟಿದ್ದಾರೆ.

**ಮಾನ್ಯ ಸತ್ಯನಾರಾಯಣ ಸಿನ್ಹಾ** (ಬಿಹಾರ್ : ಸಾಮಾನ್ಯ) : ಸನ್ಮಾನ್ಯ ಅಧ್ಯಕ್ಷರೆ, ನಾನು ತಿದ್ದು ಪಡಿಯನ್ನು ಪ್ರಸ್ತಾವಿಸುತ್ತೇನೆ.

"ನಿಲುವಳಿಯ ಕೊನೆಯಲ್ಲಿ, ಮುಂದೆ ಕಂಡಂತೆ ಹೊಸ ಕಂಡಿಕೆಯೊಂದನ್ನು ಸೇರಿಸಿ."

"ಸಮಿತಿಯ ಸಮಾವೇಶಕ್ಕೆ ಎರಡಕ್ಕಿಂತ ಕಡಿಮೆ ಇಲ್ಲದಂತೆ ಸಮಿತಿಯ ಸದಸ್ಯರ ಹಾಜರಾತಿ ಅಗತ್ಯ"

**ಸನ್ಮಾನ್ಯ ಅಧ್ಯಕ್ಷರು :** ಡಾ। ಪಟ್ಟಾಭಿ ಸೀತಾರಾಮಯ್ಯ, ತಾವು ತಿದ್ದುಪಡಿಯನ್ನು ಅಂಗೀಕರಿಸುತ್ತೀರಾ?

**ಡಾ। ಬಿ. ಪಟ್ಟಾಭಿ ಸೀತಾರಾಮಯ್ಯ :** ನಾನು ಅಂಗೀಕರಿಸುತ್ತೇನೆ.

ಸನ್ಮಾನ್ಯ ಅಧ್ಯಕ್ಷರು : ಹಾಗಿದ್ದರೆ ನಾನು ತಿದ್ದುಪಡಿಯಾದ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. ತಿದ್ದುಪಡಿಯಾದ ಪ್ರಸ್ತಾವ ಅಂಗೀಕೃತವಾಯಿತು.

ಒಕ್ಕೂಟದ ಸಭೆಗೆ (Combine metralines) ಗೆ ವಹಿಸಿದ

ವಿಷಯಗಳನ್ನು ಕುರಿತ ಸಮಿತಿ :

**ಗೌರವಾನ್ವಿತ ಶ್ರೀ. ಸಿ. ರಾಜಗೋಪಾಲಾಚಾರಿಯರ್** (ಮದರಾಸು : ಸಾಮಾನ್ಯ) : ನನ್ನ ಹೆಸರಿನಲ್ಲಿರುವ ಪ್ರಸ್ತಾವವನ್ನು ಮಂಡಿಸಲು ಅನುಮತಿ ಬೇಡುತ್ತೇನೆ; ನಿಲುವಳಿಯು ಹೀಗಿದೆ :

ಸಂಪುಟ ಪ್ರತಿನಿಧಿಮಂಡಲದ ಹೇಳಿಕೆಯ ೧೫(೧)ನೇ ಕಂಡಿಕೆಯಲ್ಲಿ ಕೇಂದ್ರಸಭೆಗೆ ಗೊತ್ತುಪಡಿಸಿರುವ ವಿಷಯಗಳ ಸಾಮಾನ್ಯವಾಗಿ ಸಂಕ್ಷಿಪ್ತವಾಗಿ ನಾಲ್ಕು ವಿಸ್ತೃತ ವರ್ಗಗಳ ಅಡಿಯಲ್ಲಿ ಕೊಡಲಾಗಿದೆ ಎಂಬ ಕಾರಣಕ್ಕಾಗಿ ಕೇಂದ್ರ ಮತ್ತು ಇತರ ಸಂವಿಧಾನಗಳ ರಚನೆಗಾಗಿ, ಈ ವಿಷಯಗಳನ್ನು ವ್ಯಾಪ್ತಿಯ ತಿಳಿವಳಿಕೆ ಅಗತ್ಯವಾಗಿದೆ. ಕೇಂದ್ರಕ್ಕೆ ಸಂಬಂಧಿಸಿದಂತೆ ಸಂವಿಧಾನದ ಉಪಬಂಧಗಳಿಗೂ, ೧೯ನೇ ಖಂಡಿಕೆಯ ಖಂಡ ೫ರಲ್ಲಿ ಉಲ್ಲೇಖಿಸಿರುವಂತೆ, ಸಂವಿಧಾನಗಳ ಉಪಬಂಧಗಳಿಗೂ ನಡುವೆ ಸಾಧ್ಯವಾದಷ್ಟೂ ಪರಸ್ಪರ ವ್ಯಾಪ್ತವಾಗುವುದನ್ನು (Overlapping) ಮತ್ತು ತಾಕಲಾಟವನ್ನು ನಿವಾರಿಸಲು ಎಲ್ಲ ಸಂವಿಧಾನಗಳೂ ಅಕ್ಕಪಕ್ಕದಲ್ಲಿ ಒಂದೇ ಸಾಲಿನಲ್ಲಿ ಇರುವಂತೆ ರಚಿಸಲು ಸಾಧ್ಯವಾಗಬೇಕೆಂಬ ಕಾರಣಕ್ಕಾಗಿ ಹೇಳಿಕೆಯಲ್ಲಿ ಸೇರಿಸಲ್ಪಟ್ಟಿದೆ. ೧೯ನೇ ಕಂಡಿಕೆಯ ೫ನೇ ಖಂಡದಲ್ಲಿ ಉಲ್ಲೇಖಿಸಿದ, ಸಂವಿಧಾನಗಳ ರಚನೆಗೆ ಮುನ್ನ ಕೇಂದ್ರಕ್ಕೆ ಗೊತ್ತು ಪಡಿಸಿದ್ದು ಹೆಣೆದುಕೊಂಡಿರುವ ವಿಷಯಗಳ ಪರಿಶೀಲನೆಗಾಗಿ ಪಟ್ಟಿ ತಯಾರಿಸುವುದು ಅಗತ್ಯವೆಂಬ ಕಾರಣಕ್ಕಾಗಿ ಸಭೆಯು ಮುಂದೆ ತಿಳಿಸಿದಂತೆ ನಿರ್ಣಯಿಸುತ್ತದೆ.

ಎ) ಏಕೈಕ ವರ್ಗಾವಣೀಯ ಮತವಿಧಾನದಿಂದ, ಅನುಪಾತಾಧಾರಿತ ಪ್ರಾತಿನಿಧ್ಯದ ತತ್ತ್ವದ ಮೇಲೆ, ಚುನಾಯಿತರಾದ ೧೨ ಸದಸ್ಯರ ಸಮಿತಿಯೊಂದು ರಚನೆಯಾಗಿ, ಮೇಲ್ಕಂಡ ವಿಷಯಗಳನ್ನು ಪರೀಕ್ಷಿಸಿ ೧೯೪೭ರ ಏಪ್ರಿಲ್, ೧೫ನೇ ತಾರೀಖಿಗೆ ಮೀರದಂತೆ, ಸಭೆಗೆ ವರದಿ ಮಾಡಬೇಕು.

ಅಧ್ಯಕ್ಷರು ಇನ್ನೂ ಹತ್ತು ಮಂದಿಯನ್ನು ಸಮಿತಿಗೆ ಸೇರಿಸಬೇಕು. ಈ ಹತ್ತು ಮಂದಿ ಹೆಚ್ಚುವರಿ ಸದಸ್ಯರ ಸಮಗ್ರ ಆಯ್ಕೆ ಅದರ ಅಥವಾ ಯಾರೊಬ್ಬರ ಆಯ್ಕೆಯ ಸಮಯ ಮತ್ತು ರೀತಿ, ಅಧ್ಯಕ್ಷರ ನಿರ್ಧಾರಕ್ಕೆ ಬಿಟ್ಟಿದ್ದು.

ಮಾನ್ಯರೆ, ವಿಷಯವನ್ನು ಕುರಿತು ಒಂದಿಷ್ಟು ಪೂರ್ವ ಸೂಚನೆಯನ್ನು ಕೊಡಬಹುದಾಗಿದ್ದರೆ, ನನ್ನ ಪ್ರಸ್ತಾವಕ್ಕೆ ಮೂರು ತಿದ್ದುಪಡಿಗಳು ಸದನದ ಮುಂದೆ ಬರುತ್ತವೆ. ಅವು ಪೂರಕ ವಿಷಯಗಳನ್ನು ಕುರಿತದ್ದು. ಅವುಗಳನ್ನು ಮುಂದೆ ಮಾನ್ಯ ಮುನ್ಷಿ ಮತ್ತು ಮಾನ್ಯ ಸತ್ಯನಾರಾಯಣ ಸಿನ್ಹ ಅವರು ಮಂಡಿಸುತ್ತಾರೆ. ನಾನು ಅವುಗಳನ್ನು ಅನುಮೋದಿಸಲು ಪ್ರಾಸ್ತಾವಿಸುತ್ತೇನೆ. ವಿಷಯ ಗ್ರಹಣ ಸುಲಭವಾಗಲೆಂಬ ಉದ್ದೇಶದಿಂದ ನಾನು ತಿದ್ದುಪಡಿಯಾಗುವ ಪ್ರಸ್ತಾವದ ಓದುತ್ತೇನೆ; ಎಂದರೆ ಉಪೋದ್ಘಾತ ಮೊದಲಿನಂತೆಯೇ ಇರುತ್ತದೆ. ಆದರೆ ಪ್ರಸ್ತಾವದ ಪರಿಣಾಮಕಾರಿ ಭಾಗ ಈ ರೀತಿ ಇದೆ.

"ಈ ಸಭೆ ನಿರ್ಣಯಿಸುವಂತೆ

ಎ) ಮುಂದೆ ಕಾಣುವ ಸದಸ್ಯರನ್ನು ಒಳಗೊಂಡ ಸಮಿತಿ–

೧. ಪಂಡಿತ್ ಜವಾಹರ್ ಲಾಲ್ ನೆಹರು

**ಮಾನ್ಯ ಸಿ.ಇ. ಗಿಬ್ಬನ್** (ಸಿ.ವಿ. ಗಿಬ್ಬನ್ ಬಿಹಾರ್ : ಸಾಮಾನ್ಯ) : ಮಾನ್ಯರೆ, ಇಲ್ಲೊಂದು ಕ್ರಿಯಾಲೋಪ. ತಿದ್ದುಪಡಿಗಳನ್ನು ಅಧಿಕೃತವಾಗಿ ಪ್ರಸ್ತಾವಿಸಿ ನಿಲುವಳಿಯ ಪ್ರಸ್ತಾವಕರು ಅವುಗಳನ್ನು ಅಂಗೀಕರಿಸುವ ಮುನ್ನ ಮೂಲ ನಿಲುವಳಿಯಲ್ಲಿ ಅವುಗಳನ್ನು ನಿಗಮಿತಗೊಳಿಸಲಾದೀತೆ?

**ಸನ್ಮಾನ್ಯ ಅಧ್ಯಕ್ಷರು :** ಅವರು, ಅದರಲ್ಲಿ ಯಾವುದೇ ಭಾಗವನ್ನು ನಿಗಮಿತಗೊಳಿಸಿಲ್ಲ. ಬರೆ ಓದುತ್ತಿದ್ದಾರಷ್ಟೆ.

**ಮಾನ್ಯ ಗಿಬ್ಬನ್ :** ಅವುಗಳನ್ನು ಮಂಡಿಸುವ ಮುಂಚೆ, ಅಂಗೀಕರಿಸುತ್ತಿದ್ದಾರೆ.

**ಸನ್ಮಾನ್ಯ ಅಧ್ಯಕ್ಷರು:** ಅಂಗೀಕರಿಸುವುದಾಗಿ ಹೇಳಿದ್ದಾರೆ.

ಮಾನ್ಯ ಶ್ರೀ ಸಿ. ರಾಜಗೋಪಾಲಾಚಾರ್ಯರು: ಪತ್ರದಲ್ಲಿರುವ ನಿಲುವಳಿಯನ್ನು ನಾನು ಯಥಾರೂಪದಲ್ಲಿ ಓದಿದ್ದೇನೆ. ಪ್ರಚುರ ಪಡಿಸಿದ ತಿದ್ದುಪಡಿಗಳನ್ನು ಪ್ರಸ್ತಾವಿಸಿದ್ದೇನೆ. ಅದರಿಂದ ಕಾಲ ಉಳಿತಾಯವಾಗುತ್ತದೆಂದು ಅಂದುಕೊಂಡಿದ್ದೇನೆ. ಆ ತಿದ್ದುಪಡಿಗಳನ್ನು ಅಂಗೀಕರಿಸಲು ಉದ್ದೇಶಿಸಿದ್ದೇನೆಂದು ಈ ಮೊದಲೆ ಸದಸ್ಯರಿಗೆ ತಿಳಿಸಿದ್ದೇನೆ. ಅನುಮತಿಕೊಟ್ಟರೆ ವಿಷಯದ ಸ್ಪಷ್ಟವಾದ ಗ್ರಹಿಕೆಗಾಗಿ ನಾನು ಓದುತ್ತೇನೆ. ನಾನು ಮುಂದೆ ಓದುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು :** ಆಯಿತು.

**ಗೌರವಾನ್ವಿತ ಶ್ರೀ ಸಿ. ರಾಜಗೋಪಾಲಾಚಾರ್ಯರು :** ಪರಿಣಾಮಕಾರಿ ಭಾಗ ಹೀಗಿದೆ:

ಸಭೆಯ ನಿರ್ಣಯದಂತೆ

ಎ. ಪ್ರಾರಂಭದಲ್ಲಿ ಮುಂದೆ ಕಾಣಿಸಿದ ಸದಸ್ಯರನ್ನೊಳಗೊಂಡ ಸಮಿತಿ :

೧. ಗೌರವಾನ್ವಿತ ಪಂಡಿತ್ ಜವಾಹರ್‌ಲಾಲ್ ನೆಹರು

೨. ಶರತ್ ಚಂದ್ರ ಬೋಸ್

೩. ಡಾ। ಪಟ್ಟಾಭಿ ಸೀತಾರಾಮಯ್ಯ

೪. ಗೌರವಾನ್ವಿತ ಪಂಡಿತ್ ಗೋವಿಂದ ವಲ್ಲಭ ಪಂತ್

೫. ಮಾನ್ಯ ಜೈರಾಮ್‌ದಾಸ್ ದೌಲತ್ ರಾಂ

೬. ಶ್ರೀ ಬಿಶ್ವನಾಥ್ ದಾಸ್

೭. ಗೌರವಾನ್ವಿತ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್

೮. ಬಕ್ಷಿ ಸರ್. ಟೇಕ್ ಚಂದ್

೯. ದಿವಾನ್ ಬಹಾದೂರ್ ಸರ್. ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್

೧೦. ಮಾನ್ಯ ಡಿ.ಪಿ. ಖೈತಾನ್

೧೧. ಮಾನ್ಯ ಎಂ.ಆರ್. ಮಸಾನಿ

೧೨. ಮಾನ್ಯ ಕೆ.ಎಂ. ಮುನ್ಷಿ

(ಅವರುಗಳಿಂದ) ರಚನೆಯಾಗಲಿ, ಮೇಲ್ಕಂಡ ವಿಷಯಗಳನ್ನು ಸಮಿತಿ ಪರಾಮರ್ಶಿಸಿ ೧೯೪೭ರ ಏಪ್ರಿಲ್ ೧೫ರ ಒಳಗೆ ವರದಿಯನ್ನು ಸಭೆಗೆ ಸಲ್ಲಿಸಲಿ.

ಬಿ) ಅಧ್ಯಕ್ಷರು ಇನ್ನೂ ಹತ್ತು ಮಂದಿಯನ್ನು ಸಮಿತಿಗೆ ಸೇರ್ಪಡೆ ಮಾಡಬಹುದು. ಈ ಎಲ್ಲರ ಅಥವಾ ಯಾರೊಬ್ಬರ ಆಯ್ಕೆಯ ಸಮಯ ಮತ್ತು ರೀತಿ ಅಧ್ಯಕ್ಷರ ನಿರ್ಧಾರಕ್ಕೆ ಬಿಟ್ಟಿದ್ದು.

ಸಿ) ತತ್ಕಾಲದಲ್ಲಿ, ಸಮಿತಿಯ ಸಮಾವೇಶದಲ್ಲಿ, ಅದರ ಒಟ್ಟು ಸದಸ್ಯತ್ವದ ಮೂರನೇ ಒಂದು ಭಾಗ ಕೋರಂ ಇರಬೇಕು.

ಡಿ) ಸಮಿತಿಯ ಸ್ಥಾನಗಳು, ಆಕಸ್ಮಿಕವಾಗಿ ತೆರವಾದಾಗ ಅವುಗಳನ್ನು, ಅಧ್ಯಕ್ಷರ ನಾಮನಿರ್ದೇಶನದ ಮುಖೇನ ಭರ್ತಿ ಮಾಡತಕ್ಕದು.

ಈ ಪ್ರಸ್ತಾವ ಉದ್ದೇಶವೇನೆಂದರೆ, ಸಭೆಗೆ ಸಂವಿಧಾನವನ್ನು ರಚಿಸುವ ಕಾರ್ಯದಲ್ಲಿ ನೆರವಾಗುವುದು. ಮುಂದೆ ಯಾವುದೇ ಸಂದರ್ಭದಲ್ಲಿ, ಸಮಿತಿಯ ವಿವಿಧ ವರ್ಗಗಳ ನಡುವೆ ಸಮನ್ವಯ ಸಾಧಿಸಲಾಗದೆ, ಪರಸ್ಪರ ವ್ಯಾಪ್ತಿಯಾಗಲಿ, ತಾಕಲಾಟವಾಗಲಿ ಆಗುವಂತೆ ವ್ಯವಹಾರಗಳು ನಡೆಯದಂತೆ ತಪ್ಪಿಸುವುದು. ಅಥವಾ ಇತರ ಕಾರಣಗಳಿಂದಾಗಿ ಜರುಗಬಹುದಾದ ಪ್ರಮಾದವನ್ನು ತಪ್ಪಿಸುವುದು. ನಾವು ತಪ್ಪಿಸಬಹುದಾದ ಸಾಧ್ಯತೆಗಳೇನೆಂಬುದರ ಬಗ್ಗೆ ಸ್ಪಷ್ಟವಾಗಿ ವಿವರಿಸಲು ಅನುಮತಿ ಕೋರುತ್ತೇನೆ.

ಮಾನ್ಯರೆ, ಅತ್ಯಂತ ಗಂಭೀರವಾದ ಕರ್ತವ್ಯವೊಂದು ಸಭೆಯ ಹೆಗಲೇರಿದೆ. ಇಡೀ ಜಗತ್ತಿನಲ್ಲಿ ಯಾವುದೇ ಸಂವಿಧಾನ ರಚನೆಗೆ ವಹಿಸಿಕೊಟ್ಟಿದ್ದಕ್ಕೆ ಹೆಚ್ಚಿನ ಜವಾಬ್ದಾರಿಯನ್ನು ಸಭೆ ಹೊತ್ತಿದೆ. ಇದು ಅಪಾರ ಜನಸ್ತೋಮಕ್ಕೆ ತೃಪ್ತಿ ತರಬೇಕಿದೆ. ಹತ್ತು ಹಲವು ಭಿನ್ನಾಭಿಪ್ರಾಯಗಳನ್ನು, ಭಿನ್ನಾಭಿರುಚಿಗಳನ್ನು ಸಮನ್ವಯಗೊಳಿಸಬೇಕಿದೆ. ಅದರ ಮುಂದಿರುವ ಸಮಸ್ಯೆ ಈ ಹಿಂದೆ ಎದುರಿಸಿದಷ್ಟೆ ಕ್ಲಿಷ್ಟವಾದುದು. ಬ್ರಿಟಿಷ್ ಸರ್ಕಾರದ ಹೇಳಿಕೆ ತಕ್ಕಮಟ್ಟಿಗೆ ಸ್ಪಷ್ಟವಾಗಿದೆ. ಆದರೆ ನಾವು ನಿರೀಕ್ಷಿಸಿದಷ್ಟು ಸೃಷ್ಟವಾಗಿಲ್ಲ. ಈ ಸಭೆಯ ಕಾರ್ಯಕ್ರಮದ ಆಧಾರವಾದ ಬ್ರಿಟಿಷ್ ಸರ್ಕಾರದ ಹೇಳಿಕೆಯನ್ನು ಅವಲೋಕಿಸಿದರೆ, ಸ್ಪಷ್ಟವಾಗಿ ಯಾವುದೇ ವಿಷಯವನ್ನು ಇತ್ಯರ್ಥಗೊಳಿಸಿದಂತೆ, ಅದು ತೋರುವುದಿಲ್ಲ.

ನಂ. ೧. ನಾವು ಸ್ವತಂತ್ರ ಭಾರತಕ್ಕಾಗಿ, ಒಂದು ಸಂವಿಧಾನವನ್ನು ರಚಿಸಬೇಕೆಂದು ನಿರ್ಧರಿಸಲಾಗಿದೆ.

ನಂ. ೨. ರಕ್ಷಣೆ, ಸಂಪರ್ಕ ಮತ್ತು ವಿದೇಶ ವ್ಯವಹಾರಗಳ ಜೊತೆಗೆ ಮೇಲಿನ ಬಾಬುಗಳ ನಿರ್ವಹಣೆಗಾಗಿ ಅಗತ್ಯ ಹಣಕಾಸು, ಇವುಗಳ ಮೇಲೆ ಚಲಾಯಿಸಬಹುದಾದ ಅಧಿಕಾರ ಕೇಂದ್ರಕ್ಕಿರುವ ರೀತಿಯಲ್ಲಿ ನಾವು ಸಂವಿಧಾನವನ್ನು ರಚಿಸಬೇಕಾಗುತ್ತದೆ.

ಮೂರನೆಯದಾಗಿ ಇನ್ನೊಂದು ನಿಯಮವನ್ನು ವಿಶದಪಡಿಸಲಾಗಿದೆ. ಅದೇಂದರೆ ಉಳಿಕೆ ಅಧಿಕಾರಗಳು. ಎಂದರೆ, ಕೇಂದ್ರ ಸರ್ಕಾರ ವರ್ಗಾವಣೆ ಮಾಡಲ್ಪಡದ ಅಧಿಕಾರಗಳು ಪ್ರಾಂತ್ಯಗಳಲ್ಲಿ ಉಳಿಯತಕ್ಕದು. ನಾಲ್ಕನೆಯದಾಗಿ, ಒಂದು ಪೂರಕ ಅಂಶವನ್ನು ವಿವರಿಸಲಾಗಿದೆ. ಅದೇಂದರೆ, ಅಂತಹ ಉಳಿಕೆ ಅಧಿಕಾರಗಳನ್ನು ಪ್ರಾಂತ್ಯಗಳು ಯಾವುದೇ ಸಮೂಹಕ್ಕೆ ವರ್ಗಾಯಿಸಲು ಉದ್ದೇಶಿಸಿದರೆ, ಅವುಗಳನ್ನು ಆ ಸಮೂಹಕ್ಕೆ ವರ್ಗಾಯಿಸಬಹುದು. ಕೇಂದ್ರೀಯ ವಿಷಯಗಳನ್ನು ಹೊರತುಪಡಿಸಿ ಮಿಕ್ಕೆಲ್ಲವೂ ಮತ್ತು ಎಲ್ಲ ಉಳಿಕೆ ಅಧಿಕಾರಗಳೂ, ಪ್ರಾಂತ್ಯಗಳಿಗೇ ಸಲ್ಲತಕ್ಕದ್ದು.

ಕೇಂದ್ರಕ್ಕೆ ವಹಿಸಿಕೊಟ್ಟ ವಿಷಯಗಳನ್ನು ಮತ್ತು ಅಧಿಕಾರಗಳನ್ನು ಹೊರತುಪಡಿಸಿ ಮಿಕ್ಕೆಲ್ಲವನ್ನೂ ಪ್ರಾಂತ್ಯಗಳು ಉಳಿಸಿಕೊಳ್ಳುತ್ತವೆ. ಇದು ೧೫ನೇ ವಾಕ್ಯಖಂಡದ ೩ ಮತ್ತು ೪ನೇ ವಾಕ್ಯಖಂಡ ಮುಂದೆ, ೧೦ ವರುಷಕ್ಕೊಮ್ಮೆ ಸಂವಿಧಾನದ ಪುನರೀಕ್ಷಣವಾಗಬೇಕು. ಪುನರೀಕ್ಷಣದ ಹೊಣೆ, ಪ್ರಾಂತ್ಯಗಳಿಗೆ ಸೇರಿದ್ದು. ಇವು ೧೫ನೇ ಖಂಡದಲ್ಲಿ ವಿವರಿಸಲಾದ ನಿಯಮಗಳು.

ಇದನ್ನು ನಾವು ಒಂದಿಷ್ಟು ಗಾಢವಾಗಿ ಆಲೋಚನೆ ಮಾಡೋಣ. ಒಂದನೆ ಉಪಖಂಡದಲ್ಲಿ ಹೀಗಿದೆ:

"ಮೇಲಿನ ವಿಷಯಗಳಿಗೆ ಅಗತ್ಯವಿರುವ ಎಲ್ಲ ಹಣಕಾಸು ಉತ್ಪಾದನೆಗೆ ಅಗತ್ಯವಿರುವ ಅಧಿಕಾರವನ್ನು ಕೇಂದ್ರ ಸರ್ಕಾರ ಹೊಂದಿರಬೇಕು".

ಯಾವುದೀ ಅಧಿಕಾರ? ಧನ ಉತ್ಪಾದನೆಗಾಗಿ ಕಾನೂನು ಜಾರಿಗೆ ತರಬೇಕೆನ್ನುವುದೇ ವಾಸ್ತವವಾಗಿ ಅಧಿಕಾರದ ತಾತ್ಪರ್ಯವಾಗುವುದಾದರೆ, ಅದು ಸಂಗ್ರಹಣೆ ಮತ್ತು ಅಗತ್ಯಬಿದ್ದಾಗ ನ್ಯಾಯಿಕ ವ್ಯವಸ್ಥೆಯ ಸೇವೆ ಪಡೆಯುವ ಅಧಿಕಾರವನ್ನು ಒಳಗೊಂಡಂಥ ಕಾನೂನು ಆಗಿರಬೇಕು. ಈ ಉದ್ದೇಶಕ್ಕಾಗಿ ಇಲ್ಲಿ ಯಾವ ಉಪಬಂಧವೂ ಉಕ್ತವಾಗಿಲ್ಲ ಮತ್ತೆ ೧೫ನೇ ಖಂಡದ ನಿಯಮಗಳನ್ನು ಕಾರ್ಯರೂಪಕ್ಕೆ ತರಲು, ಅಗತ್ಯ ಪ್ರಕ್ರಿಯೆಯನ್ನು ರೂಪಿಸಿರುವ ೧೯ನೇ ಖಂಡವನ್ನು ಗಮನಿಸಿದಾಗ, ವಿಚಿತ್ರವೆನಿಸುವಂತೆ ಒಂದು ಲೋಪ ಎದ್ದು ತೋರುತ್ತದೆ. ೧೯ನೇ ಖಂಡದ ೫ನೇ ಉಪವಾಕ್ಯ ಖಂಡದಲ್ಲಿ, ಪ್ರಾಂತೀಯ ಸಂವಿಧಾನಗಳನ್ನು ರಚಿಸಲು ತೊಡಗುವಂತೆ ವಿವಿಧ ವಿಭಾಗಗಳಿಗೆ (Sections) ನಿರ್ದೇಶನ ನೀಡಲಾಗಿದೆ ಮತ್ತು ಅವು ಸಮೂಹ ಸಂವಿಧಾನವನ್ನು ರಚಿಸುವ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತವೆ. ಅದು ಹೌದಾದರೆ, ಆ ಸಮೂಹ ಯಾವ ಪ್ರಾಂತೀಯ ವಿಷಯವನ್ನು ಪರಿಗಣಿಸುತ್ತವೆ ಎಂಬುದು ತಿಳಿದುಬಂದಿಲ್ಲ. ಮುಂದೆ ಈ ವಿಭಾಗಗಳ ಪ್ರತಿನಿಧಿಗಳು ಮತ್ತು ಭಾರತೀಯ ಪ್ರತಿನಿಧಿಗಳು ಪುನಃ ಸೇರುತ್ತಾರೆ. ಇದರ ಉದ್ದೇಶ ಕೇಂದ್ರ ಸಂವಿಧಾನವನ್ನು ರಚಿಸುವುದು. ಸಮೂಹ ಸಂವಿಧಾನ ಹೇಗೆ ಮತ್ತು ಯಾವಾಗ ರಚನೆಯಾಗಬೇಕೆಂದು ತಿಳಿಸುವ ಉಪಬಂಧವಿಲ್ಲ. ಸಮೂಹ ಸಂವಿಧಾನವನ್ನು ರಚಿಸುವ ಬಗ್ಗೆ ಆಯಾ ವಿಭಾಗಗಳು ನಿರ್ಧರಿಸುತ್ತವೆ ಮತ್ತು ಆಯಾ ಸಮೂಹಗಳು ಚರ್ಚಿಸುವ ವಿಷಯಗಳನ್ನು ವಿಭಾಗಗಳೇ ತೀರ್ಮಾನಿಸುತ್ತವೆ ಎಂದು ತಿಳಿಸುವುದನ್ನು ಬಿಟ್ಟು, ಅದಕ್ಕಿಂತ ಅತೀತವಾಗಿ ಸಮೂಹ ಸಂವಿಧಾನ ರಚನೆಯ ಬಗ್ಗೆಯೇ ಯಾವೊಂದೂ ಉಪಬಂಧವನ್ನು ಇಲ್ಲಿ ಕಾಣಲಾಗದು.

ನಂತರ, ಅಲ್ಪಸಂಖ್ಯಾತರ ಬಗ್ಗೆ ಸಲಹಾ ಸಮಿತಿಯ ಉಪಬಂಧಗಳನ್ನು ಪರಿಶೀಲಿಸಿದರೆ ನಮಗೆ ತಿಳಿದುಬರುವುದು ಇಷ್ಟು, ಮೂಲಭೂತ ಹಕ್ಕುಗಳು, ಅಲ್ಪಸಂಖ್ಯಾತರ ರಕ್ಷಣೆಗಾಗಿ ಖಂಡಗಳು, ಬುಡಕಟ್ಟು ಮತ್ತು ಹೊರಗುಳಿದ ಪ್ರದೇಶಗಳ ಆಡಳಿತ ನಿರ್ವಹಣೆ ಇವುಗಳ ಬಗ್ಗೆ ಸಲಹಾ ಸಮಿತಿ, ಕೇಂದ್ರ ಸಂವಿಧಾನ ರಚನಾಸಭೆಗೆ ವರದಿ ಮಾಡುತ್ತದೆ. ಈ ಹಕ್ಕುಗಳು ಪ್ರಾಂತೀಯ, ಸಮೂಹ ಅಥವಾ ಕೇಂದ್ರೀಯ ಸಂವಿಧಾನಗಳಲ್ಲಿ ನಿಗಮಿತಗೊಳ್ಳುತ್ತವೆಯೇ ಎಂಬುದರ ಬಗ್ಗೆಯೂ ಅದು ಸಲಹೆ ನೀಡಬೇಕು. ತಾರ್ಕಿಕವಾಗಿ ವಿವೇಚಿಸುವುದಾದರೆ, ಸಲಹಾ ಸಮಿತಿಯು, ಕೇಂದ್ರ ಸಭೆಗೆ ವರದಿ ಸಲ್ಲಿಸಿದ ನಂತರ ಅವುಗಳನ್ನು, ಪ್ರಾಂತೀಯ ಯಾ ಸಮೂಹ ಯಾ ಕೇಂದ್ರ ಸಂವಿಧಾನಗಳಲ್ಲಿ ನಿಗಮಿತಗೊಳಿಸುವಂತೆ ಕ್ರಮ ತೆಗೆದುಕೊಳ್ಳುವ ಅಧಿಕಾರ ಕೇಂದ್ರ ಸಭೆಗಿರಬೇಕು. ಪ್ರಾಂತೀಯ ಮತ್ತು ಸಮೂಹ ಸಂವಿಧಾನಗಳು ಮೊದಲೆ ರಚನೆಯಾಗುವುದಾದರೆ, ಕೇಂದ್ರ ಸಭೆಯ ಮುಂದಿನ ದಿನಾಂಕದ ಅಧಿವೇಶನದಲ್ಲಿ, ಅವುಗಳನ್ನು ನಿಗಮಿತಗೊಳ್ಳುವಂತೆ ತೀರ್ಮಾನ ತೆಗೆದುಕೊಳ್ಳುವುದಾದರೆ, ಅದಕ್ಕೆ ಸಂಬಂಧಿಸಿದ ಪ್ರಕ್ರಿಯೆ ಏನು? ಸಂಪುಟ ನಿಯೋಗದ ಹೇಳಿಕೆಗಳು ಅಥವಾ ಈ ಸಭೆಯ ಪ್ರಸ್ತಾವಗಳ ಉದ್ದೇಶ ಸಫಲವಾಗಲು, ಬಹಳಷ್ಟು ಸಮನ್ವಯ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯವಿದೆ. ನಾವು ೧೯ನೇ ಖಂಡದಲ್ಲಿ ನಮೂದಿಸಿರುವ ಯೋಜನೆಗಳನ್ನು ಅಕ್ಷರಶಃ ವ್ಯಾಖ್ಯಾನಿಸುವುದಾದರೆ, ಮುಂದೆ ವಿವಿಧ ಅಧಿವೇಶನಗಳಲ್ಲಿ ಚರ್ಚೆಗೆ ಬರಲಿರುವ ವಿಷಯಗಳನ್ನೆ ಈಗ ಕೈಗೆತ್ತಿಕೊಂಡು ಅನುಷ್ಠಾನಕ್ಕೆ ತರುವುದಾದರೆ ಬೇರೇನೂ ಬೇಕಿಲ್ಲವೆಂದು ಭಾವಿಸಿದರೆ ಮುಂದೆ ಬಲು ದೊಡ್ಡ ತೊಂದರೆಗೆ ಸಿಲುಕಬೇಕಾದೀತು. ಸಂಪುಟ ನಿಯೋಗದ ಸ್ಪಷ್ಟವಾದ ಹೇಳಿಕೆಯನ್ನು ಕಾರ್ಯರೂಪಕ್ಕೆ ತರಲಾಗುವುದಿಲ್ಲ. ಈ ಎಲ್ಲ ವಿಷಯಗಳಿಗೆ ಅಗತ್ಯವಿರುವ ಪೂರ್ವಭಾವಿ ಚಿಂತನೆಯಲ್ಲಿ ತೊಡಗಿ, ಸಭೆಗೆ ವರದಿ ಮಾಡುವ ಸಮಿತಿಯ ರಚನೆಯನ್ನು ಕುರಿತ ಈ ಪ್ರಸ್ತಾವವನ್ನು ಅಂಗೀಕರಿಸುವುದು ಉಚಿತ. ಇದು ಈ ಅಧಿವೇಶನ ಕೊನೆಗೊಳ್ಳುವ ಮೊದಲೆ ನಡೆದರೆ ಮುಂದೆ ನಮ್ಮ ಕಾರ್ಯಯೋಜನೆಯನ್ನು ರೂಪಿಸಬಹುದು.

ಹಿಂದೆ ನಾ ಹೇಳಿದಂತೆ, ಸಭೆಯ ತುಂಬ ಗಂಭೀರವಾದ ವಿಷಯಗಳನ್ನು ಪರಿಶೀಲಿಸುವುದಿದೆ. ನಾವು ಬಹಳಷ್ಟು ಆಲೋಚನೆಯಲ್ಲಿ ತೊಡಗಬೇಕಿದೆ. ನಾವು ಕೇವಲ ಭಾವನೆಗಳನ್ನೂ, ಕಲ್ಪನೆಗಳನ್ನೂ ಹೊತ್ತು, ಕಾರ್ಯನಿರ್ವಹಿಸಲಾಗದು. ನಾವಿಲ್ಲಿ ಸಭೆ ಸೇರಿರುವುದು. ಕೇವಲ ಹಿಂದಿನ ನಿರ್ಧಾರಗಳು, ಅಭಿಪ್ರಾಯಗಳು ಮತ್ತು ಕಾರ್ಯಕ್ರಮ ಕುರಿತ ವಿಚಾರವಿನಿಮಯಕ್ಕಾಗಿ ಎಂಬ ಭಾವನೆ ಬೇಡ. ಸಂವಿಧಾನ ಸಭೆಯಲ್ಲಿ ಮಹತ್ತರ ಚಿಂತನಾರ್ಹ ವಿಷಯಗಳು ನಮ್ಮ ಮುಂದಿವೆ. ಪರಿಸ್ಥಿತಿ ಹೀಗಿರುವಾಗ, ನಮಗೆ ಒಂದು ಆಯ್ದ ಯುಕ್ತ ಸಮಿತಿಯ ಸಹಕಾರ ಅಗತ್ಯ. ಸಮಿತಿಯು ತೊಂದರೆಗಳೆಲ್ಲವನ್ನೂ ಪರಿಶೀಲಿಸಿ ನಮ್ಮ ಕಾರ್ಯಗಳ ನಡುವೆ ಉದ್ಭವಿಸುವ ಸಮಸ್ಯೆಗಳ ಬಗ್ಗೆ ಸಲಹೆ ಸೂಚನೆಗಳನ್ನು ನೀಡಬೇಕಿದೆ. ಆ ಉದ್ದೇಶದಿಂದಲೆ ಸಮಿತಿಯ ರಚನೆಯನ್ನು ಪ್ರಸ್ತಾವಿಸಲಾಗಿದೆ. ಅಷ್ಟೇ ಹೊರತಾಗಿ, ಕ್ಯಾಬಿನೆಟ್ ಮಿಷನ್‌ನ ಹೇಳಿಕೆಯನ್ನು ತೃಣೀಕರಿಸುವ ಉದ್ದೇಶದಿಂದಲ್ಲ ಅಥವಾ ಯಾವುದರ ಬಗ್ಗೆಯೂ ತಿರಸ್ಕಾರ ಮನೋಭಾವ ಹೊಂದಿಲ್ಲ. ಇದು ಕೇವಲ ನಮ್ಮ ತೊಂದರೆಗಳ ಬಗ್ಗೆ ಆಲೋಚಿಸುವಂತೆ ಮತ್ತು ಅವುಗಳಿಗೆ ಪರಿಹಾರ ಹುಡುಕುವ ದೃಷ್ಟಿಯಿಂದ ಮಂಡಿಸಿದ ಪ್ರಸ್ತಾವ.

ಮಾನ್ಯರೆ, ನಾನು ಇನ್ನೊಂದು ಬಗೆಯಲ್ಲಿ ಈ ವಿಷಯವನ್ನೆ ವಿಶ್ಲೇಷಿಸುವುದಾದರೆ, ಯಾವುದೇ ವಿಷಯವನ್ನು ಕುರಿತು ಯೋಚಿಸುವಾಗ ನಮಗಿಂತ ಅನ್ಯರ ಬಗ್ಗೆ ಚಿಂತನೆಯಲ್ಲಿ ತೊಡಗುವುದು, ಸುಸಂಸ್ಕೃತರ ಲಕ್ಷಣ ಮಾತ್ರವಲ್ಲ, ಅದು ರಾಜನೈತಿಕ ನಿಪುಣನ ಲಕ್ಷಣ. ಅಂತೆಯೇ ಸಭೆಗೆ ಗೈರುಹಾಜರಾದವರ ಬಗ್ಗೆ ಚಿಂತಿಸಬೇಕಾದುದು ಉಚಿತ. ಆ ಕಾರಣದಿಂದಲೆ, ಪ್ರತಿಯೊಂದು ಪ್ರಸ್ತಾವವನ್ನು ಮಂಡಿಸುವಾಗಲೂ ಗೌರವಾನ್ವಿತ ಸದಸ್ಯರು, ಇಲ್ಲಿಯ ಅನುಪಸ್ಥಿತರ ಉದ್ದೇಶಗಳು ಮತ್ತು ಧ್ಯೇಯಗಳ ಬಗ್ಗೆ ಆಲೋಚಿಸುತ್ತ ಬಂದಿದ್ದಾರೆ. ಹತ್ತು ಹಲವು ಭಿನ್ನಾಭಿಪ್ರಾಯಗಳು ನಮ್ಮೊಳಗೆ ಉದ್ಭವಿಸುವ ಸಾಧ್ಯತೆಗಳು ಬಹಳಷ್ಟಿವೆ. ನೀವು ಈ ತೊಂದರೆಗಳನ್ನು ನಿರೀಕ್ಷಿಸಲು ಪ್ರಯತ್ನಿಸಬೇಕು. ಅವುಗಳ ನಿವಾರಣೆಗೆ ಸಾಧ್ಯವಾಗದಷ್ಟೂ ಯತ್ನಿಸಬೇಕು. ಈ ಸಂದರ್ಭದಲ್ಲಿ ನಾನೊಂದು ಮಾತು ಹೇಳಬಯಸುತ್ತೇನೆ. ಸಭೆಗೆ ಬಾರದಿರುವವರು, ನಾನೀಗ ಪ್ರಸ್ತಾವಿಸುತ್ತಿರುವ ಸಮಿತಿಯ ಬಗ್ಗೆ ಅಪಾರ್ಥ ಕಲ್ಪಿಸಿಕೊಳ್ಳಬಾರದು. ಮುಸ್ಲಿಮ್ ಲೀಗ್‌ನ ನೀತಿಯೆಂದರೆ, ತಮ್ಮದೇ ಪ್ರತ್ಯೇಕ ಸರ್ವತಂತ್ರ ಸ್ವತಂತ್ರ ಗಣರಾಜ್ಯವನ್ನು ಸ್ಥಾಪಿಸುವುದು. ಕ್ಯಾಬಿನೆಟ್ ಮಿಷನ್ ಹೇಳಿಕೆಯ ಮೇರೆಗೆ, ಸಂವಿಧಾನ ರಚನಾಸಭೆ ತನ್ನ ಕರ್ತವ್ಯದ ಹೊಣೆ ಹೊತ್ತಿದೆ. ಮಹಾರಾಜರ ಸರ್ಕಾರದ ಹೇಳಿಕೆಯಲ್ಲಿ ಒಂದಂಶ ಸ್ಪಷ್ಟವಾಗಿದೆ. ಅದೇಂದರೆ, ಇಡೀ ಭಾರತದಲ್ಲಿ ಒಂದು ಸರ್ವತಂತ್ರ ಸ್ವತಂತ್ರ ಸರ್ಕಾರ ಇರಬೇಕೆಂಬುದು. ಈ ಸಂದರ್ಭದಲ್ಲಿ, ಸಂಶಯಕ್ಕೆ ಆಸ್ಪದವಿಲ್ಲದೆ ಇಲ್ಲಿ ತೀರ್ಮಾನವಾಗಿರುವಂತೆ, ಭಾರತದಲ್ಲಿ ಎರಡು ಗಣರಾಜ್ಯಗಳ ಸ್ಥಾಪನೆ ಅನೂಹ್ಯ. ಈ ನಿರ್ಧಾರ, ನಮ್ಮೆಲ್ಲ ಕಾರ್ಯವೈಖರಿಗೆ ಸ್ಪಷ್ಟನೆ ನೀಡುತ್ತದೆ. ನಾವು ನಮ್ಮ ಹಾದಿಯಲ್ಲಿ ಎಡತಾಕಿರುವ ಎಲ್ಲ ಭಿನ್ನಾಭಿಪ್ರಾಯಗಳನ್ನು ನಿವಾರಿಸುತ್ತೇವೆ. ನಾನು ಸ್ಪಷ್ಟವಾಗಿ ಹೇಳಬೇಕೆಂದರೆ, ಲೀಗ್, ತಪ್ಪು ದಾರಿ ಹಿಡಿದು, ತನ್ನ ಉದ್ದೇಶ ಸಾಧಿಸಲು ಹೊರಟಿದೆ. ನೀತಿಯ ಮೇರೆಗೆ, ತಮ್ಮವರು ನ್ಯಾಯಸಮ್ಮತಕ್ಕಿಂತ ಮೀರಿದ ಬೇಡಿಕೆಗಳ ಮೇಲೆ ನಿಯಂತ್ರಣವಿಟ್ಟಿದ್ದರೆ, ಪ್ರಾಯಶಃ ತಮ್ಮ ಗುರಿಯನ್ನು ಸಾಧಿಸಿರಬಹುದಾಗಿತ್ತು. ಈಗಿನಂತೆ, ತೊಂದರೆಗೆ ಸಿಲುಕುತ್ತಿರಲಿಲ್ಲ. ಸ್ಪಷ್ಟವಾಗಿ ಹೇಳುತ್ತೇವೆ, ಮುಸ್ಲಿಮ್ ಲೀಗ್‌ನ ಮುಂದೆ ಈ ಅತಿ ದೊಡ್ಡ ತೊಡಕೆಂದರೆ, ಅವರು ಈ ಸಭೆಯಲ್ಲಿ ಸೇರಬೇಕಾಗಿರುವುದು ಏಕಮೇತ ಗಣರಾಜ್ಯವನ್ನು ಒಪ್ಪಿಕೊಳ್ಳುವುದು ನಿಸ್ಸಂಶಯವಾಗಿ ಶಾಶ್ವತ ನಿರ್ಧಾರವಾಗುತ್ತದೆ. ಅದರಿಂದಲೆ ಇಲ್ಲಿಗೆ ಬರುವುದು ಅವರಿಗೆ ಕಷ್ಟವಾಗುತ್ತದೆ. ಆ ಕಾರಣಕ್ಕಾಗಿಯೇ ಅವರ ಆಗಮನ ಮುಂದೂಡುತ್ತಿದೆ. ಆ ಕಾರಣದಿಂದಲೆ, ಇತರ ಪಕ್ಷಗಳು ತಮ್ಮೊಳಗೆ ಸಮಾಲೋಚನೆಗೆಂದು ದಿನಾಂಕ ಗೊತ್ತು ಪಡಿಸಿ, ಸಭೆ ಸೇರಿದ ನಂತರವೇ ಲೀಗ್‌ನವರು ತಾರೀಖನ್ನು ನಿಗದಿ ಪಡಿಸುತ್ತಾರೆ. ಆ ಕಾರಣದಿಂದಲೆ, ಈಗ ನಾವು ನೋಡುತ್ತಿರುವಂತೆ, ಕೊನೆಯ ಬಾರಿಗೆ ನಮ್ಮ ಸಭೆ ಮುಂದೂಡಿದಾಗಲೂ, ಅವರು ಸಭೆಗೆ ಸೇರುವ ನಿರ್ಧಾರ ಮಾಡಿಲ್ಲ. ಬೇರೆ ಪಕ್ಷದ ತೊಂದರೆಗಳನ್ನು

ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ. ಲೀಗ್, ಇಲ್ಲಿಗೆ ಬಂದರೆ, ತಮ್ಮ ಪ್ರತ್ಯೇಕತೆಯನ್ನು ಬದಿಗಿಟ್ಟು ಕೇವಲ ಒಂದೇ ಗಣರಾಜ್ಯ ಎಂಬ ಸ್ಪಷ್ಟ ನಿರ್ಧಾರವನ್ನು ಅವರು ಏಕಾಏಕಿ ತೆಗೆದುಕೊಳ್ಳಲು ಆಗುವುದಿಲ್ಲ. ನಾವು ಈ ತೊಂದರೆಗಳನ್ನು ಅರ್ಥಮಾಡಿಕೊಳ್ಳೋಣ. ಅವರ ವಿಳಂಬಕ್ಕೆ ಅಪಾರ್ಥ ಕಲ್ಪಿಸುವುದು ಬೇಡ, ನಾವು ಆದಷ್ಟು ತ್ವರಿತವಾಗಿ ಕಾರ್ಯೋನ್ಮುಖರಾಗಲು ಬಯಸುತ್ತೇವೆ. ಈ ಸಭೆಗೆ ಬಂದು ಮುಖ್ಯವಾಹಿನಿಯಲ್ಲಿ ತೊಡಗಲು ಮುಸ್ಲಿಮ್‌ಲೀಗ್‌ಗೆ ಇರುವ ಬಾಧಕಗಳನ್ನು ಅರಿತು ಮುನ್ನಡೆಯೋಣ. ಅವರು ಆ ಬಗ್ಗೆ ಆಲೋಚನೆ ಮಾಡಲಿ. ಅವರಿಗೆ, ಇಲ್ಲಿಗೆ ಬರಲು ಸಾಕಷ್ಟು ಕಾಲಾವಕಾಶ ನೋಡೋಣ. ಇದರರ್ಥ ಅವರು ಬರಲು ನಿರ್ಧರಿಸುವವರೆಗೆ ನಮ್ಮ ಕೆಲಸವನ್ನು ಸ್ಥಗಿತಗೊಳಿಸುವುದಾಗಲಿ, ಆಲೋಚಿಸುವುದನ್ನು ನಿಲ್ಲಿಸುವುದೆಂದಾಗಲಿ, ಯಾವುದನ್ನಾದರೂ ನಿಲ್ಲಿಸಬಹುದೆಂದಾಗಲಿ ಅಲ್ಲ. ಅದು ಅನಿಶ್ಚಿತ ಮುಂದೂಡಿಕೆಗೆ ಕಾರಣವಾಗುತ್ತದೆ. ಆದುದರಿಂದ, ಮಾನ್ಯರೆ, ೧೨ ಸದಸ್ಯರ ಸಮಿತಿಯನ್ನು ರಚಿಸುವಂತೆ ಪ್ರಸ್ತಾವಿಸಲು ನನಗೆ ಕಿಂಚಿತ್ತೂ ಅಳುಕಿಲ್ಲ. ಅದರಿಂದ ನಾವು ಸಂವಿಧಾನವೊಂದನ್ನು ರಚಿಸಬಹುದು; ಆದರಲ್ಲಿ ಉದ್ಯುಕ್ತರಾದವರ ಎದುರಾಗಿ ಯಾವ ಸಮಸ್ಯೆಯೂ ನಿಲ್ಲದು. ಅದು ಏಕೈಕ ಬಲಾಢ್ಯ ಸಂವಿಧಾನವಾಗಿ ರೂಪುಗೊಂಡು, ಜೊತೆಗೆ ಸುಭದ್ರವಾದ, ಬಲವಾದ ಪ್ರಾಂತೀಯ ಸಂವಿಧಾನಗಳನ್ನು ಹೊಂದಿರುತ್ತದೆ. ಪ್ರಾಂತೀಯ ಸಂವಿಧಾನಗಳು ಕೇಂದ್ರೀಯ ಸಂವಿಧಾನದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತವೆ. ಅವೆರಡು ಅಖಂಡ ಗಣತಂತ್ರವೊಂದರ ಅಡಿಯಲ್ಲಿ ಜಾರಿಗೊಳ್ಳುತ್ತವೆ. ಆದುದರಿಂದ, ಈ ಪ್ರಸ್ತಾವವನ್ನು ಸಭೆಯ ಮುಂದೆ ಅಂಗೀಕಾರಕ್ಕಾಗಿ ಪ್ರಸ್ತಾವಿಸುತ್ತಿದ್ದೇನೆ. ನಾನು ಹಿಂದೆ ಹೇಳಿದಂತೆ, ಈ ಪ್ರಸ್ತಾವಕ್ಕೆ ಎರಡು ತಿದ್ದುಪಡಿಗಳಿರುತ್ತವೆ. ಒಂದು ಅನುಪಾತಾಧಾರಿತ ಚುನಾವಣೆಯ ಬದಲು, ಕರಾರುವಾಕ್ಕಾಗಿ ಸದಸ್ಯರನ್ನು ಸೂಚಿಸಿದಂತೆ ಆಯ್ಕೆ ಮಾಡುವುದು ಇನ್ನೊಂದು ಸಭೆಯ ಕೋರಂ ನಿಗದಿಗೊಳಿಸುವುದು; ಅಂತೆಯೇ ಮತ್ತೊಂದು ಸಮಿತಿಯಲ್ಲಿ ಖಾಲಿಬಿದ್ದ ಸ್ಥಾನಗಳನ್ನು ಗೊತ್ತು ಪಡಿಸುವುದು. ಈ ತಿದ್ದುಪಡಿಗಳೊಡನೆ ಪ್ರಸ್ತಾಪಿಸುವುದನ್ನು ಸಭೆಯ ಅವಗಾಹನೆಗೆ ತರುತ್ತಿದ್ದೇನೆ.

**ಸನ್ಮಾನ್ಯ ಅಧ್ಯಕ್ಷರು** : ಮಾನ್ಯ ಮುನ್ಷಿಯವರು ತಮ್ಮ ತಿದ್ದುಪಡಿಯನ್ನು ಪ್ರಸ್ತಾವಿಸಬಹುದು.

**ಮಾನ್ಯ ಸತ್ಯನಾರಾಯಣ ಸಿನ್ಹ** : ನಾನು ಅದನ್ನು ಪ್ರಸ್ತಾವಿಸಲೆ?

**ಸನ್ಮಾನ್ಯ ಅಧ್ಯಕ್ಷರು** : ಆಯಿತು.

**ಮಾನ್ಯ ಸತ್ಯನಾರಾಯಣ ಸಿನ್ಹ** : ತಮ್ಮ ಅನುಮತಿಯ ಮೇರೆಗೆ, ಮಾನ್ಯ ಮುನ್ಷಿಯವರ ಹೆಸರಿನಲ್ಲಿರುವ ತಿದ್ದುಪಡಿಯನ್ನು ನಾನು ಮಂಡಿಸುತ್ತೇನೆ. ಅದೆಂದರೆ

"ಪ್ರಸ್ತಾವದ 'ಎ' ಖಂಡದಲ್ಲಿ "ಹನ್ನೆರಡು ಸದಸ್ಯರು" ಎಂಬ ಪದಗಳಿಂದ ಪ್ರಾರಂಭಗೊಂಡು "ಏಕೈಕ ವರ್ಗಾವಣೀಯ ಮತ" ಎಂಬ ಪದದವರೆಗೆ ಕೆಳಕಂಡವುಗಳನ್ನು ಪ್ರತಿಯೋಜಿಸಬೇಕು.

ಮುಂದೆ ಕಾಣಲಿರುವಂತೆ ಸದಸ್ಯರ (ಪಟ್ಟಿ ಹೀಗಿದೆ):

೧. ಗೌರವಾನ್ವಿತ ಪಂಡಿತ್ ಜವಾಹರ್ ಲಾಲ್ ನೆಹರು
೨. ಮಾನ್ಯ ಶರತ್ ಚಂದ್ರ ಬೋಸ್
೩. ಡಾ। ಪಟ್ಟಾಭಿ ಸೀತಾರಾಮಯ್ಯ
೪. ಗೌರವಾನ್ವಿತ ಪಂಡಿತ್ ಗೋವಿಂದ ವಲ್ಲಭ ಪಂತ್
೫. ಮಾನ್ಯ ಜೈರಾಮ್‌ದಾಸ್ ದೌಲತ್‌ರಾಮ್
೬. ಶ್ರೀ ಬಿಶ್ವನಾಥ್ ದಾಸ್
೭. ಗೌರವಾನ್ವಿತ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್
೮. ಬಕ್ಷಿ ಶ್ರೀ ಟೀಕ್ ಚಂದ್

೯. ದಿವಾನ್ ಬಹಾದುರ್ ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್

೧೦. ಮಾನ್ಯ ಡಿ.ಪಿ. ಖೈತಾನ್

೧೧. ಮಾನ್ಯ ಎಂ.ಆರ್. ಮಸಾನಿ

೧೨. ಮಾನ್ಯ ಕೆ.ಎಂ. ಮುನ್ಷಿ.

ತಾವು ಅನುಮತಿಸಿದರೆ ನಾನು ಇನ್ನೊಂದು ತಿದ್ದುಪಡಿಯನ್ನು ಪ್ರಸ್ತಾವಿಸುತ್ತೇನೆ.

**ಮಾನ್ಯ ಸಿ.ಇ. ಗಿಬ್ಬನ್** : ಸರ್. ಇಲ್ಲೊಂದು ಕ್ರಿಯಾಲೋಪ.

ಮಾನ್ಯ ಮುನ್ಷಿಯವರು ತಿದ್ದುಪಡಿಗೆ ನೋಟೀಸು ಕೊಟ್ಟಿದ್ದಾರೆ. ಅವರು ಸಭೆಯಲ್ಲಿ ಹಾಜರಿಲ್ಲ. ಅವರ ಅನುಪಸ್ಥಿತಿಯಲ್ಲಿ ಬೇರೆ ಯಾರಾದರೂ ಪ್ರಸ್ತಾವಿಸಬಹುದೆ?

**ಸನ್ಮಾನ್ಯ ಅಧ್ಯಕ್ಷರು** : ಅಧ್ಯಕ್ಷರು ಅನುಮತಿ ಇತ್ತರೆ, ಬೇರೆ ಯಾರೇ ಆಗಲಿ ಪ್ರಸ್ತಾವಿಸಬಹದೆಂದು ಭಾವಿಸುತ್ತೇನೆ.

**ಮಾನ್ಯ ಸತ್ಯನಾರಾಯಣ ಸಿನ್ಹ** : ಮಾನ್ಯ ಮುನ್ಷಿಯವರ ಹೆಸರಲ್ಲಿ ಇರುವ ಮತ್ತೊಂದು ತಿದ್ದುಪಡಿಯನ್ನು ನಾನೀಗ ಮುಂದೆ ಕಂಡಂತೆ ಪ್ರಸ್ತಾವಿಸುತ್ತೇನೆ.

"ಖಂಡದ ಕೊನೆಯಲ್ಲಿರುವ "ಮತ್ತು" ಎಂಬ ಪದವನ್ನು

ಎ) ಬಿಡಬೇಕು ಮತ್ತು ಖಂಡದ ಕೊನೆಯಲ್ಲಿ

ಬಿ) ಪೂರ್ಣವಿರಾಮ ಚಿಹ್ನೆಯ ಬದಲು ಅರ್ಧವಿರಾಮ ಚಿಹ್ನೆಯನ್ನು ಪ್ರತಿಯೋಜಿಸಬೇಕು ಮತ್ತು ಮುಂದೆ ಕಂಡಂತೆ ಸೇರಿಸಬೇಕು; ಮತ್ತು

ಸಿ) "ಆಕಸ್ಮಿಕವಾಗಿ ಸಮಿತಿಯಲ್ಲಿ ಸ್ಥಾನಗಳು ತೆರವಾದಾಗ ಆದಷ್ಟು ಬೇಗನೆ, ಅಧ್ಯಕ್ಷರಿಂದ ನಾಮನಿರ್ದೇಶನದ ಕ್ರಮದಲ್ಲಿ ಸಭೆಯಲ್ಲಿರುವ ಯಾವ ಸದಸ್ಯನನ್ನಾದರೂ ನೇಮಿಸಿ ಖಾಲಿ ಸ್ಥಾನಗಳನ್ನು ಭರ್ತಿ ಮಾಡಬಹುದು.

"ಖಂಡದ ಕೊನೆಯಲ್ಲಿರುವ "ಮತ್ತು" ಎಂಬ ಪದವನ್ನು

(ಎ) ಬಿಡಬೇಕು ಮತ್ತು ಖಂಡದ ಕೊನೆಯಲ್ಲಿ

(ಬಿ) ಪೂರ್ಣವಿರಾಮಕ್ಕೆ ಬದಲು ಅರ್ಧವಿರಾಮವನ್ನು ಸೇರಿಸಿ ಕೆಳಕಂಡಂತೆ ಹೊಸ ಕಂಡಿಕೆಯೊಂದನ್ನು ಸೇರಿಸಬೇಕು.

"(ಸಿ) ಸಮಿತಿಗೆ ಕೋರಂ ಒಟ್ಟು ಸದಸ್ಯರ ೧/೩ ಭಾಗ, ತತ್ಕಾಲದಲ್ಲಿ ಇರಬೇಕು."

**ಮಾನ್ಯ ಪಿ.ಆರ್. ಠಾಕೂರ್** (ಬಂಗಾಳ : ಸಾಮಾನ್ಯ) : ಇದೊಂದು ಮುಖ್ಯ ನಿಲುವಳಿ. ಕೇಂದ್ರಕ್ಕೆಂದು ಮೀಸಲಿಡುವ ವಿಷಯಗಳನ್ನು ಈ ಸಮಿತಿ ನೇಮಕಗೊಂಡ ಮೇಲೆ ಪರಿಶೀಲಿಸಲಿದೆ. ರಾಷ್ಟ್ರಾದ್ಯಂತ ಶಾಂತಿ ಸ್ಥಾಪನೆ, ಮತ್ತು ಬರಪ್ರತಿರೋಧದ ಬಗ್ಗೆ, ನನ್ನ ಗೌರವಾನ್ವಿತ ಮಿತ್ರರಾದ ಶ್ರೀ ರಾಜ ಗೋಪಾಲಾಚಾರಿಯರ್ ಅವರು ಏನೂ ಹೇಳಲಿಲ್ಲ. ಇವು ಬಹಳ ಅಗತ್ಯವೆನಿಸುವ ಅಂಶಗಳು. ಈ ವಿಷಯವನ್ನು ನಾನು ಪ್ರಸ್ತಾಪಿಸಲು ಕಾರಣವೇನೆಂದರೆ, ನಾವು ಇತ್ತೀಚೆಗೆ ಕೋಮು ಸಂಘರ್ಷದ ಆಘಾತಕ್ಕೆ ಸಿಕ್ಕೆವು. ಜೊತೆಗೆ ಬರವೂ ಕಾಡಿತು. ನಾವು ಸ್ಥಳೀಯ ಸರ್ಕಾರದಿಂದ ನೆರವು ಬೇಡಿದರೂ, ಸರ್ಕಾರ ಸಹಾಯ ನೀಡುವಂತಿರಲಿಲ್ಲ. ಕೇಂದ್ರಕ್ಕೆ ಮೊರೆ ಇಡಲು ಸಾಧ್ಯವಾಗಲಿಲ್ಲ. ಮತ್ತೊಂದು ವಿಷಯವೆಂದರೆ ಮಧ್ಯಂತರ ಸರ್ಕಾರ ರಚನೆಯಾದಾಗ, ಈ ಸರ್ಕಾರ, ಪ್ರಾಂತೀಯ ಸರ್ಕಾರಗಳ ಆಡಳಿತ ವ್ಯವಹಾರಗಳಲ್ಲಿ ತಲೆ ಇಡುವುದಿಲ್ಲವೆಂದಿತು. ಕೋಮು ಸಂಘರ್ಷ ಯಾ ಬರದ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಮಧ್ಯೆ ಪ್ರವೇಶಿಸದೆ ಹೋದಾಗ, ಪ್ರಾಂತ್ಯದ ಜನತೆಯ ಪಾಡೇನಾಗುವುದೆಂಬುದನ್ನು ನಾವು ಪರಿಶೀಲಿಸಬೇಕಾಗುತ್ತದೆ. ಆದುದರಿಂದ ರಾಷ್ಟ್ರದಲ್ಲಿ ಶಾಂತಿ ಸ್ಥಾಪನೆಗಾಗಿ ಮತ್ತು ಬರದ ಪ್ರತಿರೋಧದ ಬಗ್ಗೆ ಸಮಿತಿಯ ಗಂಭೀರವಾಗಿ ಆಲೋಚಿಸಿ ತೀವ್ರ ಕ್ರಮ

ಕ್ಕೆಗೊಳ್ಳುತ್ತದೆಂದು ನಂಬುತ್ತೇನೆ. ಕಾಂಗ್ರೆಸ್ ಹೈಕಮಾಂಡಿನ ಗಮನಕ್ಕೆ, ಈ ಸಭೆಯ ಮುಖೇನ ತರಬಯಸುವ ವಿಷಯವೊಂದಿದೆ. ಈ ಹೈಕಮಾಂಡ್ ಬಂಗಾಲಿಗಳ ವಿಷಯದಲ್ಲಿ ಸಹಾನುಭೂತಿ ಹೊಂದಿಲ್ಲವೆಂಬ ಭಾವನೆ ನಮ್ಮಲ್ಲಿ ಹೇಗೋ ಮೊಳೆತಿದೆ. ಬಂಗಾಲಿಗಳ ಕಷ್ಟ ನಿಷ್ಠುರಗಳ ಬೆನ್ನಲ್ಲೆ ಸ್ವಾತಂತ್ರ್ಯ ಪಡೆಯಲು ಬಯಸುತ್ತಿದ್ದಾರೆ. ಈ ಸಮಿತಿಯು ವಿಷಯವನ್ನು ಪರ್ಯಾಲೋಚಿಸಿ, ಮುಂದೆಯಾದರೂ, ಬರದಿಂದಲೋ ಕೋಮು ಸಂಘರ್ಷದಿಂದಲೋ ಬಂಗಾಳ ಬಾಧೆಗೆ ಒಳಗಾಗುವುದನ್ನು ತಪ್ಪಿಸುವುದೆಂದು ನಂಬಿದ್ದೇನೆ.

**ಮಾನ್ಯ ಜೈಪಾಲ್ ಸಿಂಗ್** : ಸನ್ಮಾನ್ಯ ಅಧ್ಯಕ್ಷರೆ, ಇದೊಂದು ಹೊರೆ – ಈ ಪಟ್ಟಿ ನಮ್ಮ ಮೇಲೆ ಹೇರಲಾಗುತ್ತಿದೆ. ಇದರ ಬಗ್ಗೆ ನನ್ನದೇನೂ ತಕರಾರಿಲ್ಲ. ಮಿ। ಸತ್ಯನಾರಾಯಣ ಸಿನ್ಹ ಅವರು ಪ್ರಸ್ತಾವಿಸಿರುವ ನಿಲುವಳಿಯಲ್ಲಿ ಗಣ್ಯಾತಿಗಣ್ಯರ ಹೆಸರುಗಳಿವೆ. ನನಗೆ ಇದರ ಬಗ್ಗೆ ಕಿಂಚಿತ್ ಆತಂಕವಿದೆ. 'ಬಿ' ವಾಕ್ಯ ಖಂಡದ ಅಡಿಯಲ್ಲಿ, ಅಧ್ಯಕ್ಷರು ಇನ್ನೂ ಹತ್ತು ಸದಸ್ಯರನ್ನು ನಾಮನಿರ್ದೇಶನ ಮಾಡಬಹುದೆಂದು ಮಾನ್ಯ ರಾಜಗೋಪಾಲಾಚಾರಿಯರ್ ತಿಳಿಸಿದ್ದಾರೆ. ಗೈರುಹಾಜರಾದ ಸದಸ್ಯರಿಗೂ ಸಮಿತಿಯಲ್ಲಿ ಅವಕಾಶ ಕಲ್ಪಿಸಬಹುದೆಂಬುದನ್ನು ಸೂಚ್ಯವಾಗಿ ತಿಳಿಸಿದ್ದಾರೆ. ಹನ್ನೆರಡು ಹೆಸರುಗಳಲ್ಲಿ ಕೈಬಿಡಲ್ಪಟ್ಟ ಪಕ್ಷಗಳು ಯಾ ಗುಂಪುಗಳಿಂದ ಆಯ್ಕೆ ಸದಸ್ಯರ ನಾಮನಿರ್ದೇಶನ ಮಾಡುವುದು ಅಧ್ಯಕ್ಷರ ವಿವೇಚನೆಗೆ ಬಿಟ್ಟಿದ್ದೆಂದು ಅವರು ತಿಳಿಸಿದ್ದರೆ, ಆ ಬಗ್ಗೆ ಹೇಳುವಂತಹುದೇನೂ ನನಗೆ ಇದ್ದಿರಲಾರದು. ಪಟ್ಟಿಯನ್ನು ನೋಡಿದರೆ, ಐಕ್ಯತೆಗಿಂತ ಏಕರೂಪತೆಯ ಕಡೆ ಒತ್ತು ಕೊಟ್ಟಂತಿದೆ. ಪ್ರಾಯಶಃ ಡಾ। ಜಯಕರ್, ಡಾ। ಅಂಬೇಡ್ಕರ್ ಮತ್ತು ಡಾ। ದೇಶಮುಖ್ ಅವರ ಹೆಸರುಗಳಿರಬೇಕೆಂಬುದು ನನ್ನ ಇಚ್ಛೆ.

**ಗೌರವಾನ್ವಿತ ಶ್ರೀ ಸಿ. ರಾಜಗೋಪಾಲಾಚಾರಿಯರ್** : ಸನ್ಮಾನ್ಯ ಅಧ್ಯಕ್ಷರೆ, ಭಾಷಣಕಾರರು ದಯಮಾಡಿ ಧ್ವನಿ ವರ್ಧಕದ ಮುಂದೆ ನಿಲ್ಲುವಂತೆ ತಿಳಿಸುತ್ತೀರಾ? ನನಗೆ ಅವರಾಡುವ ಮಾತುಗಳು ಕೇಳಿಸುತ್ತಿಲ್ಲ.

**ಜೈಪಾಲ್‌ಸಿಂಗ್** : ನಿನ್ನೆ ನಾನು ದನಿ ಎತ್ತರಿಸಿ ಮಾತನಾಡಿದೆ. ನಾನು ಬಹಳ ತೀವ್ರವಾಗಿ ವಾದಮಾಡುತ್ತಿದ್ದೇನೆಂದು ಪಂಡಿತ್ ಗೋವಿಂದ ವಲ್ಲಭ ಪಂತ್ ಅವರಿಗೆ ಅನಿಸಿತು. ಈ ಬೆಳಗ್ಗೆ ನನ್ನ ದನಿ ಸಾಕಷ್ಟು ಮೃದುವಾಗಿರಬೇಕೆಂದುಕೊಂಡೆ. ಇವತ್ತು ಪಂಡಿತ್ ಗೋವಿಂದ ವಲ್ಲಭ ಪಂತ್ ಅವರು ಏನಾದರೂ ತಿಳಿಯಲಿ ಮಾನ್ಯ ರಾಜಗೋಪಾಲಾಚಾರಿಯವರ ಸೌಜನ್ಯಕ್ಕಾಗಿ ದನಿ ಏರಿಸುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು** : ಧ್ವನಿವರ್ಧಕದ ಮುಂದೆ ನಿಂತರೆ ಆ ಮಟ್ಟದ ಕಿರುಚಾಟ ಅಗತ್ಯವಿರುವುದಿಲ್ಲ.

**ಮಾನ್ಯ ಜೈಪಾಲ್ ಸಿಂಗ್** : ನನ್ನ ಸುತ್ತೆಲ್ಲ ಧ್ವನಿವರ್ಧಕಗಳು ಇದ್ದಿದ್ದರೆ, ನಾನು ಅದರ ಬಳಿ ಬರುವ ಅಗತ್ಯವಿರಲಿಲ್ಲ. ಸುತ್ತಲೂ ಎಲ್ಲ ಸದಸ್ಯರನ್ನೂ ಉದ್ದೇಶಿಸಿ ಮಾತಾನಾಡಬಹುದಿತ್ತು. ನನ್ನ ನಿವೇದನೆ ಇಷ್ಟೆ. ಅಧ್ಯಕ್ಷರು ನಾಮನಿರ್ದೇಶನ ಮಾಡುವ ಸಮಿತಿಯ ಹತ್ತು ಮಂದಿಯ ಸದಸ್ಯತ್ವ ಗೈರುಹಾಜರಾದವರಿಗೆ ಮೀಸಲೆಂದು ಮಾನ್ಯ ರಾಜಗೋಪಾಲಾಚಾರಿಯರ್ ಅವರು ಹೇಳಿದಾಗ ಈ ಪಟ್ಟಿಯಲ್ಲಿ ಅವಕಾಶ ಪಡೆಯದ ಪಕ್ಷಗಳ ಗುಂಪಿನ ಯಾ ವರ್ಗಗಳ ಬಗ್ಗೆ ಆತಂಕ ಮೂಡಿತು. ನನ್ನವರ ಬಗ್ಗೆಯೇ ಹೇಳುವುದಾದರೆ, ಈ ಸದನದಲ್ಲಿ ಹಿಂದಿನಿಂದಲೂ ಬೆಳೆದು ಬಂದಿರುವ ಮನೋಭಾವನೆಯೆಂದರೆ, ಜೀವನದಲ್ಲಿ ಎಲ್ಲ ಒಳಿತುಗಳಿಂದ ಅವರು ಶಾಶ್ವತವಾಗಿ ವಂಚಿತರಾಗಬೇಕೆಂಬುದೆ! ಇದು ಮುಖ್ಯವಾದ ವಿಷಯ. ಆ ರೀತಿ ಭಾವನೆ ನನ್ನಲ್ಲಿ ಮೂಡಿದೆ; ಅದು ಸರಿ ಇರಬಹುದು ತಪ್ಪೇ ಇರಬಹುದು. ಅಷ್ಟೇನೂ ಮುಖ್ಯತ್ವ ಪಡೆಯದ ಸಮಿತಿಗಳಲ್ಲಿ ನಮಗೆ ನ್ಯಾಯ ದೊರಕಬಹುದೇನೋ ತಿಳಿಯದು. ಈ ಸಮಿತಿಯಲ್ಲೂ ಬುಡಕಟ್ಟು ಜನಾಂಗಕ್ಕೆ ಏಕೆ ಪ್ರಾತಿನಿಧ್ಯ ದೊರಕಲಿಲ್ಲವೋ ಕಾರಣ ತಿಳಿಯದು. ನಾನು ಯಾವುದೇ ತಿದ್ದುಪಡಿಯನ್ನು ಪ್ರಸ್ತಾವಿಸುತ್ತಿಲ್ಲ. ನನ್ನ ಅಭಿಪ್ರಾಯವನ್ನು ಮಂಡಿಸುತ್ತಿದ್ದೇನಷ್ಟೆ. ಡಾ। ಜಯಕರ್, ಡಾ। ಅಂಬೇಡ್ಕರ್ ಮತ್ತು ಡಾ। ದೇಶ್‌ಮುಖ್ ಅವರಂಥ ಗಣ್ಯರ ಹೆಸರುಗಳನ್ನು ಪಟ್ಟಿಯಲ್ಲಿ ಸೇರಿಸಬೇಕೆಂಬುದು ನನ್ನ ಇಚ್ಛೆ. ಅವರೂ ಸಹ, ಇಲ್ಲಿ ಉಲ್ಲೇಖಿಸಿರುವ ೧೨ ಮಂದಿ ಸದಸ್ಯರಷ್ಟೆ ಉತ್ತಮ ಕೊಡುಗೆಯನ್ನು ನೀಡಬಲ್ಲರು. ನಾನು ತಿದ್ದುಪಡಿಯನ್ನು

ಪ್ರಸ್ತಾವಿಸುತ್ತಿಲ್ಲ. ಆದರೆ ಬುಡಕಟ್ಟು ಜನಾಂಗದ ಪ್ರಾತಿನಿಧ್ಯ ಸಂಪೂರ್ಣ ಕಾಣೆಯಾಗಿರುವುದು ಅಚ್ಚರಿಗೊಳಿಸಿದೆ ಎಂದು ತಿಳಿಸುವುದು ನನ್ನ ಕರ್ತವ್ಯ ಹಾಗೆಯೇ ನಾನು ಈಗಾಗಲೆ ತಿಳಿಸಿದಂತೆ ಗಣ್ಯರ ಹೆಸರು ಬಿಟ್ಟುಹೋಗಿರುವುದೂ ಆಶ್ಚರ್ಯಕರವೆ.

**ಸರ್ದಾರ್ ಹರ್ನಾಮ್ ಸಿಂಗ್** (ಪಂಜಾಬ್ : ಸಿಖ್ಖ್) : ಈ ಪ್ರಸ್ತಾವದ ಬಗ್ಗೆ ಭಾಷಣ ಮಾಡುವುದು ನನ್ನ ಉದ್ದೇಶವಲ್ಲ. ಕೋಮು ಪ್ರಾತಿನಿಧ್ಯ ಅಥವಾ ಬುಡಕಟ್ಟು ಪ್ರದೇಶಗಳ ಪ್ರಾತಿನಿಧ್ಯಕ್ಕೆ ಆದ ಪ್ರಾಮುಖ್ಯ ನೀಡಿ ಅಗತ್ಯ ಪಡಿಸುವ ಸಮಿತಿ ಇದಲ್ಲ. ನಿಲುವಳಿಯಲ್ಲಿ ತಿಳಿಸಿದಂತೆ, ಕೇವಲ, ಕೇಂದ್ರೀಯ ವಿಷಯಗಳ ವ್ಯಾಪ್ತಿಯನ್ನು ಅರ್ಥಮಾಡಿಕೊಳ್ಳುವ ಸರಳ ಉದ್ದೇಶದಿಂದ ರಚಿತವಾದ ಸಮಿತಿ ಕೇಂದ್ರೀಯ ವಿಷಯಗಳ ವ್ಯಾಪ್ತಿಯನ್ನು ಕುರಿತು ವ್ಯಾಖ್ಯಾನ ನೀಡುವ ಸಮಿತಿಯೂ ಇದಲ್ಲ. ಆದುದರಿಂದ ಯೊರೊಬ್ಬ ಸದಸ್ಯರೂ ಸದನದಲ್ಲಿ ಕೋಮು ಯಾ ಬುಡಕಟ್ಟು ಪ್ರಾತಿನಿಧ್ಯಕ್ಕೆ ಅಗ್ರಹ ಪಡಿಸುವಂತಿಲ್ಲ. ಕೇಂದ್ರೀಯ ವಿಷಯಗಳ ಪರಿಧಿ ಮತ್ತು ವ್ಯಾಪ್ತಿಯ ಬಗ್ಗೆ ಸದನಕ್ಕೆ ವರದಿ ಮಾಡಲು, ಅತ್ಯಂತ ಮೇಧಾವಿ ಸದಸ್ಯರು ಸಮಿತಿಯಲ್ಲಿರಬೇಕು. ನಂತರ ಆ ವರದಿ ಸದನದ ಮುಂದೆ ಬಂದಾಗ, ಆಲೋಚಿಸಿ, ಸಲಹೆ ಸೂಚನೆಗಳನ್ನು ನಾವು ನೀಡಬಹುದಷ್ಟೆ.

**ಪ್ರೊ। ಎನ್.ಜಿ. ರಂಗ** : ಸನ್ಮಾನ್ಯ ಅಧ್ಯಕ್ಷರೆ, ಈ ಪಟ್ಟಿಯಲ್ಲಿ ಡಾ। ಅಂಬೇಡ್ಕರ್ ಅವರ ಹೆಸರು ಇರಲೆಂದು ನಾನು ಸಲಹೆ ನೀಡುತ್ತಿದ್ದೇನೆ. ಈಗಾಗಲೆ ಸೂಚಿಸಿರುವ ಹನ್ನೆರಡು ಮಂದಿ ಸದಸ್ಯರಲ್ಲಿ ಯೊರೊಬ್ಬರಾದರೂ ಹಿಂಸರಿಯಬೇಕೆಂದು ಕೇಳಿಕೊಳ್ಳುತ್ತೇವೆ.

**ಗೌರವಾನ್ವಿತ ಶ್ರೀ ಸಿ. ರಾಜಗೋಪಾಲಾಚಾರಿಯರ್** : ಮಾನ್ಯರೆ ಶ್ರೀ ಹರ್ನಾಮ್ ಸಿಂಗ್ ಅವರು ಸದನದ ಮುಂದೆ ಇಟ್ಟಿರುವ ಸಲಹೆಯನ್ನು ಬಿಟ್ಟು ಬೇರಾವ ಸಲಹೆಯನ್ನು ವಿವೇಚಿಸದಂತೆ ಸದನವನ್ನು ಕೇಳಿಕೊಳ್ಳುತ್ತೇನೆ. ಈ ಪಟ್ಟಿಯನ್ನು ನೀವು ಮತ್ತೊಮ್ಮೆ ಅವಲೋಕಿಸಿದರೆ, ಸಂಪೂರ್ಣ ಪಕ್ಷಾತೀತ ಧೋರಣೆ ಉಳ್ಳವರು, ವಿಷಯಗಳ ಪರ್ಯಾಲೋಚನೆ ಮತ್ತು ವಿವಾದಗಳ ವಿಶ್ಲೇಷಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ, ಕಾನೂನುಗಳನ್ನು ಸಾಕಾರಗೊಳಿಸುವಲ್ಲಿ ಪರಿಣತರಾದ ಗಣ್ಯರು ಇದರಲ್ಲಿರುವುದು ನಿಮ್ಮ ಗಮನಕ್ಕೆ ಬರುತ್ತದೆ. 'ಬಿ' ಖಂಡದಲ್ಲಿ, ಅಧ್ಯಕ್ಷರು ಸಮಿತಿಗೆ ಇನ್ನೂ ಹತ್ತು ಮಂದಿ ಹೆಚ್ಚುವರಿ ಸದಸ್ಯರನ್ನು ನಾಮನಿರ್ದೇಶನ ಮಾಡಲು ಅವಕಾಶವಿದೆ. ಅಧ್ಯಕ್ಷರಿಗೆ ವಹಿಸಿರುವ ಅಧಿಕಾರ, ನಿಷ್ಪ್ರಯೋಜಕವಾಗಲೆಂದಲ್ಲ. ಸಮಿತಿಯಲ್ಲಿ ಕಾಣಬಹುದಾದ ಲೋಪದೋಷಗಳ ನಿವಾರಣೆಗೆ, ಅಧ್ಯಕ್ಷರು ತಮಗೆ ನೀಡಿರುವ ಅಧಿಕಾರವನ್ನು ಚಲಾಯಿಸಬಹುದು – ಈಗ ಗೈರುಹಾಜರಾಗಿರುವ ಮುಸ್ಲಿಮ್ ಲೀಗ್ ಸದಸ್ಯರು ಬಂದರೆ ಆಗ ಅಧ್ಯಕ್ಷರು ಪರಿಸ್ಥಿತಿಯನ್ನು ಪರಿಶೀಲಿಸಬಹುದು. ಆಗ ಪರಿಸ್ಥಿತಿ ಏನೆಂಬುದು ನಮಗೆ ತಿಳಿಯುತ್ತದೆ. ಅಧ್ಯಕ್ಷರು ಮನಸೋಇಚ್ಛೆ ತಮ್ಮ ಅಧಿಕಾರವನ್ನು ಚಲಾಯಿಸಿ ನಾಮನಿರ್ದೇಶನ ಮಾಡಬೇಕೆಂಬುದು ಇದರ ಉದ್ದೇಶವಲ್ಲ. ಅವರು ಮುಸ್ಲಿಮ್‌ಲೀಗ್‌ನ ಸದಸ್ಯರೊಡನೆ ಸಮಾಲೋಚಿಸುವರು. ಆ ಪಕ್ಷದಿಂದ ಸಮಿತಿಗೆ ಸದಸ್ಯರನ್ನು ಆಯ್ಕೆ ಮಾಡುವಂತೆ ಸೂಚಿಸುವರು; ಅಂತೆಯೇ ಆಯ್ಕೆಗೊಂಡ ಸದಸ್ಯರು ನಾಮನಿರ್ದೇಶಿತರಾಗಿ ಸಮಿತಿಗೆ ಸೇರುವರು.

ಇಲ್ಲಿ ಇನ್ನೊಂದು ಅಂಶ ವ್ಯಕ್ತಪಟ್ಟಿಲ್ಲ. ಅದು ರಾಜ್ಯಗಳನ್ನು ಕುರಿತದ್ದು. ಈ ಕರ್ತವ್ಯ ನಿರ್ವಹಣೆಯಲ್ಲಿ ಅತ್ಯಂತ ಸಮರ್ಥ ಪ್ರತಿನಿಧಿ ಯಾರೆಂಬುದನ್ನು ಅಧ್ಯಕ್ಷರು ವಿವೇಚಿಸುವರು. ಅವರನ್ನು ಆಯ್ಕೆ ಮಾಡುವರು. ಅವಕಾಶವಿದ್ದರೆ, ಸದನದಲ್ಲಿರುವ, ಈಗಾಗಲೆ ಸೂಚಿಸಲ್ಪಟ್ಟಿರುವ ಸಂವಿಧಾನತಜ್ಞರಲ್ಲಿ ಯಾರಾದರೂ ಸದಸ್ಯರನ್ನು ಅಧ್ಯಕ್ಷರು ನಾಮನಿರ್ದೇಶನ ಮಾಡುವರೆಂಬುದರಲ್ಲಿ ಸಂದೇಹವಿಲ್ಲ. ಆಗ ಸಮಿತಿಯು ಬಲಗೊಳ್ಳುತ್ತದೆ. ಈ ಅನಿಸಿಕೆಗಳನ್ನು ಮುಂದಿಟ್ಟುಕೊಂಡು, ಪ್ರಸ್ತಾವವನ್ನು ಅವುಗಳ ತಿದ್ದುಪಡಿಗಳೊಡನೆ ಅಂಗೀಕರಿಸಬೇಕೆಂದು, ಸದನವನ್ನು ಕೋರುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು** : ನಾನೀಗ ನಿಲುವಳಿಯನ್ನು ಸದನದ ಮತಕ್ಕೆ ಹಾಕಬೇಕಿದೆ. ನಿಲುವಳಿಯನ್ನು ಮತ್ತೊಮ್ಮೆ ಓದುವ ಅಗತ್ಯವಿದೆಯೇ? (ಸನ್ಮಾನ್ಯ ಸದಸ್ಯರು–ಬೇಡ ಬೇಡ)

**ಓರ್ವ ಗೌರವಾನ್ವಿತ ಸದಸ್ಯ :** ಮಾನ್ಯ ರಂಗ ಅವರ ತಿದ್ದುಪಡಿ ಏನಾಯಿತು?

**ಸನ್ಮಾನ್ಯ ಅಧ್ಯಕ್ಷರು :** ಮಾನ್ಯ ರಂಗ ಯಾವುದೇ ತಿದ್ದುಪಡಿಯನ್ನು ಪ್ರಸ್ತಾವಿಸಿಲ್ಲ. ಅವರು ಬರೆ ಸಲಹೆ ನೀಡಿದ್ದಷ್ಟೆ. ನಾನೀಗ ತಿದ್ದುಪಡಿಯಾದ ನಿಲುವಳಿಯನ್ನು ಸಭೆಯಲ್ಲಿ ಮತಕ್ಕೆ ಹಾಕುತ್ತೇನೆ.

ತಿದ್ದುಪಡಿ ಸಮೇತ ನಿಲುವಳಿ ಅಂಗೀಕೃತವಾಯಿತು.

**ಸನ್ಮಾನ್ಯ ಅಧ್ಯಕ್ಷರು :** ಕ್ರಮಾದೇಶ ಪತ್ರದಲ್ಲಿ, ಶ್ರೀಮತಿ ದುರ್ಗಾಬಾಯಿ ಮತ್ತು ಶ್ರೀ ಎಂ. ಅನಂತಶಯನಂ ಅಯ್ಯಂಗಾರ್ ಅವರ ಹೆಸರುಗಳಲ್ಲಿ ತಿದ್ದುಪಡಿಯನ್ನು ಪ್ರಸ್ತಾವಿಸುವುದಿದೆ. ಅವರು ಪ್ರಸ್ತಾವಿಸುವುದಿಲ್ಲವೆಂದು ತಿಳಿದುಬಂದಿದೆ.

**ಮಾನ್ಯ ಸತ್ಯನಾರಾಯಣ ಸಿನ್ಹ :** ನನ್ನ ಹೆಸರಿನಲ್ಲಿರುವ ಪ್ರಸ್ತಾವವನ್ನು ಮಂಡಿಸುತ್ತೇನೆ.

"ಸಭೆಯ ಈ ಪ್ರಾರಂಭಿಕ ಸಮಾವೇಶ, ಅಧ್ಯಕ್ಷರು ಗೊತ್ತುಪಡಿಸಿದಂತೆ ಏಪ್ರಿಲ್ ತಿಂಗಳ ನಿಗದಿತ ತಾರೀಖಿನವರೆಗೆ ಮುಂದೂಡಲ್ಪಟ್ಟಿದೆ"

ನಾನಿಲ್ಲಿ ತಿಳಿಸುವುದೇನೆಂದರೆ, ಪ್ರಾರಂಭಿಕ ಅಧಿವೇಶನದ ಮುಂದಿನ ಸಭೆಯಲ್ಲಿ, ನಮ್ಮ ಸಾಮಾನ್ಯ ವ್ಯವಹಾರಗಳ ಕ್ರಮಾದೇಶವನ್ನು ಕುರಿತು ಪರಿಶೀಲಿಸೋಣ. ಜೊತೆಗೆ ಕೇಂದ್ರ ಸಮಿತಿಯ ವರದಿ ಮತ್ತು ಸಭೆಯ ಗಮನಕ್ಕೆ ಬರುವ ಇತರ ವಿಷಯಗಳನ್ನು ಪರಿಶೀಲಿಸೋಣ.

**ಮಾನ್ಯ ಕೆ. ಸಂತಾನಂ :** ಇಲ್ಲೊಂದು ಕ್ರಿಯಾಲೋಪ. ಆ ರೀತಿ ಮುಗುಮ್ಮಾಗಿ ವಿಷಯವನ್ನು ತಿಳಿಸಲಾಗದು. ಏಕೆಂದರೆ, ೨೧ನೇ ನಿಯಮದ ಮೊದಲನೆ ಪರಂತುಕದ ರೀತ್ಯಾ ಅಧ್ಯಕ್ಷರು ಅಧಿವೇಶನವನ್ನು ಮುಂದೂಡುವ ಹಾಗಿಲ್ಲ.

**ಸನ್ಮಾನ್ಯ ಅಧ್ಯಕ್ಷರು :** ದಯವಿಟ್ಟು ಧ್ವನಿವರ್ಧಕದ ಮುಂದೆ ಬನ್ನಿ.

**ಶ್ರೀ ಮೋಹನ್‌ಲಾಲ್ ಸಕ್ಸೇನಾ** (ಸಂಯುಕ್ತ ಪ್ರಾಂತ್ಯ : ಸಾಮಾನ್ಯ) – ನಾನು ನಿಲುವಳಿಯನ್ನು ಅನುಮೋದಿಸುತ್ತೇನೆ.

**ಸೇಠ್ ಗೋವಿಂದ ದಾಸ್** (ಸಿ.ಪಿ. ಮತ್ತು ಬೆರಾರ್)

*[ಸನ್ಮಾನ್ಯ ಅಧ್ಯಕ್ಷರೆ, ಆ ರೀತಿಯ ಪ್ರಸ್ತಾವದ ಅಗತ್ಯವಿಲ್ಲವೆಂದು ತಿಳಿಸಲಿಚ್ಛಿಸುತ್ತೇನೆ. ಸಂವಿಧಾನ ರಚನಾಸಭೆಯ ಮುಂದಿನ ಅಧಿವೇಶನದ ತಾರೀಖನ್ನು ಅಧ್ಯಕ್ಷರೆ ಗೊತ್ತು ಪಡಿಸುತ್ತಾರೆ. ಹಿಂದಿನ ಅಧಿವೇಶನವನ್ನು ಮುಂದೂಡಿದಾಗ, ಇಂತಹ ನಿಲುವಳಿಯನ್ನು ಪ್ರಸ್ತಾವಿಸಲಾಗಿತ್ತೆ? ಇಲ್ಲ. ಆದುದರಿಂದ ನನ್ನ ಅಭಿಪ್ರಾಯದಂತೆ, ಈ ನಿಲುವಳಿಯ ಅಗತ್ಯವಿಲ್ಲ. ಹಾಲಿ ಅಧಿವೇಶನವನ್ನು ಮುಂದೂಡಲಾಗುತ್ತದೆ. ಅಗತ್ಯ ಇದ್ದಾಗ ಮತ್ತೆ ಕರೆಯುವ ಅಧಿಕಾರ ತಮಗಿದೆ.]*

**ಸನ್ಮಾನ್ಯ ಅಧ್ಯಕ್ಷರು :** ೨೧ನೇ ನಿಯಮದಂತೆ ಅಧ್ಯಕ್ಷರು ಕಾಲಕಾಲಕ್ಕೆ ನಿರ್ದೇಶಿಸಿದಂತೆ, ಆಯಾ ದಿನಗಳಲ್ಲಿ ಸಭೆ ಕೂರುತ್ತದೆ. ಪರಂತು, ಸಭೆಯ ಅನುಮೋದನೆ ಇಲ್ಲದೆ ಅಧ್ಯಕ್ಷರು ಸಭೆಯನ್ನು ಒಂದು ಬಾರಿಗೆ ೩ ದಿನಗಳಿಗಿಂತ ಅಧಿಕ ಮುಂದೂಡಲಾಗದು ಹಾಗಾಗಿ, ಈ ನಿಯಮದ ಅಡಿಯಲ್ಲಿ ಮೂರು ದಿನಗಳಿಗಿಂತ ಮೀರಿ ಸಭೆಯನ್ನು ಮುಂದೂಡಲು ಸಭೆಯ ಅನುಮೋದನೆ ಅಗತ್ಯ.

**ಮಾನ್ಯ ಕೆ. ಸಂತಾನಂ :** ನನ್ನ ಅಭಿಪ್ರಾಯದಂತೆ, ಒಂದು ನಿರ್ದಿಷ್ಟ ದಿನಾಂಕಕ್ಕೆ ಮುಂದೂಡಲು ಸಭೆಯ ಅನುಮತಿ ಬೇಕು. ಅನಿಶ್ಚಿತ ದಿನಾಂಕಕ್ಕೆ ಅದರ ಅಗತ್ಯವಿಲ್ಲ. ಇಲ್ಲವಾದರೆ ೩೦ ದಿನಗಳವರೆಗಿನ ಮುಂದೂಡಿಕೆ ಅಧ್ಯಕ್ಷರ ವಿವೇಚನೆಗೆ ಸೇರಿದ್ದು. ಆದರೆ ಅವರ ವಿವೇಚನಾಧಿಕಾರ ಮೂರು ದಿನಗಳಿಗೆ ಮಿತಗೊಳಿಸಲ್ಪಟ್ಟಿರುತ್ತೆ. ಪ್ರಸ್ತಾವದ ಯೋಗ್ಯತೆಗೆ ನನ್ನ ಆಕ್ಷೇಪವಿಲ್ಲ. ಇದು ಬಹಳ ಪೆಡಸಾದ, ಜಡ್ಡುಗಟ್ಟಿದ ನಿಯಮ. ಹಾಗಾಗಿ, ಇದನ್ನು ಸರಿಯಾಗಿ ವ್ಯಾಖ್ಯಾನಿಸದಿದ್ದರೆ ತಪ್ಪಾದೀತು.

**ಸನ್ಮಾನ್ಯ ಅಧ್ಯಕ್ಷರು :** ೨೧ನೇ ನಿಯಮಾನುಸಾರ, ಅಧ್ಯಕ್ಷರ ನಿರ್ದೇಶನಾನುಸಾರ, ಸಭೆಯು ಆಯಾ

ದಿನಾಂಕಗಳಲ್ಲಿ ಸಮಾವೇಶಗೊಳ್ಳುತ್ತದೆ. ಪರಂತು, ಸಭೆಯ ಅನುಮೋದನೆ ಇಲ್ಲದೆ ಅಧ್ಯಕ್ಷರು ಮೂರು ದಿನಗಳಿಗಿಂತ ಮೀರಿ ಮುಂದೂಡಲಾಗದು. ಯಾವ ನಿರ್ದಿಷ್ಟ ತಾರೀಖಿನವರೆಗೆ ಸಭೆಯನ್ನು ಮುಂದೂಡಬೇಕೆಂಬದನ್ನು ನಿಯಮದಲ್ಲಿ ಸ್ಪಷ್ಟ ಪಡಿಸಿಲ್ಲ.

**ಓರ್ವ ಗೌರವಾನ್ವಿತ ಸದಸ್ಯರು** : ೬೮ನೇ ನಿಯಮ ತಮಗೆ ಸಾಕಷ್ಟು ಅಧಿಕಾರವನ್ನು ವಹಿಸಿಕೊಡುತ್ತದೆ.

**ಸನ್ಮಾನ್ಯ ಅಧ್ಯಕ್ಷರು** : ೨೧ನೇ ನಿಯಮವೇ ಸಾಕೆಂದು ಭಾವಿಸುತ್ತೇನೆ.

**ಮಾನ್ಯ ಎಂ.ವಿ. ಕಾಮತ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ತಾತ್ತ್ವಿಕವಾಗಿ, ಪ್ರಸ್ತಾವದ ಬಗ್ಗೆ ನನ್ನದೇನೂ ಆಕ್ಷೇಪಣೆ ಇಲ್ಲ; ಆದರೆ ಅದು ಇನ್ನಷ್ಟು ವ್ಯಕ್ತವಾಗಿಯೂ, ಸ್ಪಷ್ಟವಾಗಿಯೂ ಇರಬೇಕೆಂಬುದು ನನ್ನ ಇಚ್ಛೆ. ನಾವು ಕಳೆದ ಡಿಸೆಂಬರ್‌ನಲ್ಲಿ ಸಭೆ ಸೇರಿದಾಗ, ಅಧಿವೇಶನ ಆ ತಿಂಗಳಲ್ಲೆ ಕೊನೆಗೊಳ್ಳುತ್ತದೆ ಎಂದುಕೊಂಡಿದ್ದೆ [ಗೌರವಾನ್ವಿತ ಸದಸ್ಯರು "ಇಲ್ಲ ಇಲ್ಲ"] ನಾವು ಜನವರಿ ತಿಂಗಳಿಗೆ ಮುಂದೂಡಿದೆವು. ಈಗ ಮತ್ತೆ ನಾವು ಏಪ್ರಿಲ್ ತಿಂಗಳಿಗೆ ಮುಂದೂಡುತ್ತಿದ್ದೇವೆ. ಅದರರ್ಥ ಪ್ರಾರಂಭಿಕ ಅಧಿವೇಶನ ಆರು ತಿಂಗಳವರೆಗೆ ನಡೆಯುತ್ತಲೆ ಇರುತ್ತದೆ. ಇನ್ನು ಈ ಸಭೆಯನ್ನು ಮತ್ತೆ ಮುಂದೂಡಲಾಗದು ಎಂದು ಸಭೆ ನಿರ್ಣಯಿಸುತ್ತದೆಂಬುದು, ಇಂದು ಗೈರುಹಾಜರಾದ ಸದಸ್ಯರಿಗೆ ದೊರೆಯುವುದೆಂದು ನಾವು ನಿರೀಕ್ಷಿಸಿದ್ದೆವು. ಇಂದು ಸಭೆಗೆ ಗೈರುಹಾಜರಾದ ಸದಸ್ಯರ ಸಹಕಾರವನ್ನು ಪಡೆಯುವ ಅಭಿಲಾಷೆ ಹೊತ್ತಿದ್ದೇವೆ. ಅವರು ಸಂವಿಧಾನ ರಚನೆಯಲ್ಲಿ ಸಹಕಾರ ನೀಡಬೇಕೆಂದು ಬಯಸುತ್ತೇವೆ. ಏಪ್ರಿಲ್ ತಿಂಗಳಿನಿಂದ ಮುಂದಿನ ದಿನಾಂಕದವರೆಗೆ ಸಭೆಯನ್ನು ಮುಂದೂಡುವುದಿಲ್ಲವೆಂಬುದನ್ನು ಅಲ್ಲಿಂದ ಮುಂದೆ ಇನ್ನಾವುದೇ ಮುಂದೂಡಿಕೆ ಇರುವುದಿಲ್ಲವೆಂಬ ಅಂಶವನ್ನೂ ನಿಗಮಿತಗೊಳಿಸಬೇಕು.

**ಸನ್ಮಾನ್ಯ ಅಧ್ಯಕ್ಷರು** : ತಾವೇನಾದರೂ ತಿದ್ದುಪಡಿಯನ್ನು ಪ್ರಸ್ತಾವಿಸಲಿದ್ದೀರಾ?

**ಮಾನ್ಯ ಎಂ.ವಿ. ಕಾಮತ್** : ತಮಗೆ ಆಸಕ್ತಿ ಇರುವುದಾದರೆ ತಿದ್ದುಪಡಿಯನ್ನು ಮಂಡಿಸುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು** : ನನಗೆ ಈ ವಿಷಯದಲ್ಲಿ ಆಸಕ್ತಿ ಇಲ್ಲ.

**ಮಾನ್ಯ ಎಚ್.ವಿ. ಕಾಮತ್** : ನಾನು ತಿದ್ದುಪಡಿಯನ್ನು ಪ್ರಸ್ತಾವಿಸುತ್ತೇನೆ.

**ಗೌರವಾನ್ವಿತ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** (ಮದ್ರಾಸು : ಸಾಮಾನ್ಯ) : ಮಾನ್ಯ ತಾವು ಈ ವಿಷಯ ಕುರಿತು ಈಗಾಗಲೆ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದೀರಿ. ಅದನ್ನು ಪುನಃ ಪರಿಶೀಲಿಸಬೇಕೆಂದು ಕೋರುತ್ತೇನೆ. ಮಾನ್ಯ ಸಂತಾನಂ ಅವರ ಅಭಿಪ್ರಾಯ ಉಚಿತವಾದುದೆಂದು ನನಗನಿಸುತ್ತೆ. ೨೧ನೇ ನಿಯಮದ ಪರಿಣಾಮಕಾರಿ ಭಾಗ ಹೀಗಿದೆ:

"ಸಭೆಯ ವಿಷಯಗಳ ಸೂಕ್ತತೆಯನ್ನು ಪರಿಶೀಲಿಸಿ, ಅಧ್ಯಕ್ಷರು ನಿರ್ದೇಶಿಸಿದಂತೆ ಸಭೆ ಆಯಾ ದಿನಾಂಕಗಳಲ್ಲಿ ಸೇರುತ್ತದೆ".

ನಿಯಮದ ಆ ಭಾಗಕ್ಕೆ ಮುಂದಿನ ವಾಕ್ಯ ಪರಂತುಕವಾಗಿ ಸೇರಿದೆ.

"ಪರಂತು ಸಭೆಯ ಸಮ್ಮತಿ ಇಲ್ಲದೆ ಅಧ್ಯಕ್ಷರು ಮೂರು ದಿನಗಳಿಗಿಂತ ಮೀರಿ ಅಧಿವೇಶನವನ್ನು ಮುಂದೂಡಲಾಗದು".

ಮಾನ್ಯರೆ, ಈ ಪರಂತುಕವು ಅಧ್ಯಕ್ಷರಿಗೆ ದಿನಾಂಕವನ್ನು ಗೊತ್ತು ಪಡಿಸುವ ವಿವೇಚನಾಧಿಕಾರವನ್ನು ಕೊಡುವುದಿಲ್ಲವೆಂಬುದೇ ನನ್ನ ಚಿಂತೆ. ಮೂರು ದಿನಗಳಿಗಿಂತ ಮೀರಿದಂತೆ, ಅವರು ನಿಗದಿಗೊಳಿಸಬಹುದಾದ ದಿನಾಂಕಕ್ಕೆ ಸಭೆಯ ಅನುಮೋದನೆ ಅಗತ್ಯವೆಂದಷ್ಟೆ ಅದರರ್ಥ. ಆದರೆ ದಿನಾಂಕವನ್ನು ಗೊತ್ತು ಪಡಿಸುವುದು ತಮ್ಮ ಹೊಣೆ. ಇದರ ಬಗ್ಗೆ ಕಾನೂನು ಅಥವಾ ಇತರ ತೊಡಕುಗಳನ್ನು ತಪ್ಪಿಸಲು, ಏಪ್ರಿಲ್ ತಿಂಗಳಿನಲ್ಲಿ ಒಂದು ತಾರೀಖನ್ನು ಪರಂತುಕಕ್ಕೆ ಸೇರಿಸುವಂತೆ ನಾನು ಸೂಚಿಸುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು** : ಆ ಬಗ್ಗೆ ಒಂದು ಕ್ರಿಯಾಲೋಪವನ್ನೆತ್ತಲಾಗಿದೆ. ಮತ್ತು ನಾನು ತೀರ್ಪು

ಕೊಟ್ಟಿದ್ದೆ. ನಾವು ಅಧಿವೇಶನವನ್ನು ಮುಂದೂಡುವಾಗ, ದಿನಾಂಕವನ್ನು ಗೊತ್ತು ಪಡಿಸುವ ಅಗತ್ಯವಿದೆ ಎಂದು ನಾನು ಹೇಳಲಾರೆ. ಮುಂದೆಯೂ ನಾನು ತಾರೀಖನ್ನು ನಿಗದಿಗೊಳಿಸಬಹುದು. ಅದನ್ನೆ ಈಗ ಸೂಚಿಸಲಾಗಿದೆ.

**ಸನ್ಮಾನ್ಯ ಶ್ರೀ ರಾಜಗೋಪಾಲಾಚಾರಿಯರ್** : ಮೂರು ದಿನಗಳಿಗಿಂತ ಮೀರಿ ಸಭೆಯನ್ನು ಮುಂದೂಡಲು ಸಭೆಯ ಸಮ್ಮತಿ ಪಡೆಯಲಾಗಿದೆ. ಮೂರು ದಿನಗಳಿಗಿಂತ ಮೀರಿದಂತೆ, ಕಾಲಕಾಲಕ್ಕೆ ಯಾವುದೇ ದಿನಾಂಕವನ್ನು ಗೊತ್ತು ಪಡಿಸಲು ಅಧ್ಯಕ್ಷರಿಗೆ ಅಧಿಕಾರವಿದೆ.

**ಮಾನ್ಯ ಎಚ್.ವಿ. ಕಾಮತ್** : ತಮ್ಮ ಅನುಮತಿ ಪಡೆದು "ನಿಗದಿ" ಎಂಬ ಪದದ ನಂತರ ಒಂದು ಅರ್ಧವಿರಾಮವನ್ನು ಒಳಸೇರಿಸಿ ಮುಂದೆ, ಈ ಪದಗಳನ್ನು ಸೇರಿಸಬೇಕು – "ಪ್ರಾರಂಭಿಕ ಅಧಿವೇಶನವನ್ನು ಇನ್ನು ಮುಂದೂಡಲಾಗದು".

**ಮಾನ್ಯ ಸೇಠ್ ಗೋವಿಂದ ದಾಸ್** : *[ಸನ್ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಕಾಮತ್‌ರ ತಿದ್ದುಪಡಿಯನ್ನು ವಿರೋಧಿಸುತ್ತೇನೆ. ಪರಿಸ್ಥಿತಿ ಬದಲಾಗುತ್ತಲೆ ಇರುತ್ತದೆ. ಈ ಅಧಿವೇಶನವನ್ನು ಏಪ್ರಿಲ್ ತಿಂಗಳಿನಿಂದ ಮುಂದೆ ಮುಂದೂಡಲಾಗದೆಂದು ನಾವಿಂದು ಆಲೋಚಿಸುತ್ತೇವೆ. ಈ ಪ್ರಸ್ತಾವಕ್ಕೆ ಬದ್ಧರಾಗಿ, ನಾಳೆ ಅಧಿವೇಶನವನ್ನು ಮುಂದೂಡಬೇಕೆಂದು ಆಲೋಚಿಸುವಾಗ, ಅದು ಸಾಧ್ಯವಾಗುವುದಿಲ್ಲ. ತಿದ್ದುಪಡಿ ವಿವೇಚನಾರಹಿತವಾದುದು. ಆದುದರಿಂದ ನಾವು. ಮಾನ್ಯ ಸತ್ಯನಾರಾಯಣ ಸಿನ್ಹ ಅವರು ಮಂಡಿಸಿದ ನಿಲುವಳಿಯನ್ನು ಅಳವಡಿಸಬೇಕು. ಏಪ್ರಿಲ್‌ನಲ್ಲಿ ಸಭೆ ಸಮಾವೇಶಗೊಳ್ಳುವುದಕ್ಕೆ, ನಾವು ದಿನಾಂಕವನ್ನು ಗೊತ್ತು ಪಡಿಸಬಾರದು. ಜೊತೆಗೆ ತದನಂತರವೂ ಅಧಿವೇಶನವನ್ನು ಮುಂದೂಡಲಾಗದೆಂಬ ನಿರ್ಣಯ ಕೈಗೊಳ್ಳಲಾಗದು. ಆದುದರಿಂದ, ಮಾನ್ಯ ಕಾಮತ್‌ರ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ".]*

**ಸನ್ಮಾನ್ಯ ಅಧ್ಯಕ್ಷರು** : ಬೇರೆ ಯಾರಾದರೂ ಮಾತನಾಡಲು ಬಯಸುತ್ತಾರಾ?

**ಗೌರವಾನ್ವಿತ ಸದಸ್ಯರು** : ಇಲ್ಲ.

**ಸನ್ಮಾನ್ಯ ಅಧ್ಯಕ್ಷರು** : ಮಾನ್ಯ ಸತ್ಯನಾರಾಯಣ ಸಿನ್ಹ ತಾವು ಜವಾಬು ಕೊಡಲು ಬಯಸುವಿರಾ?

**ಮಾನ್ಯ ಸತ್ಯನಾರಾಯಣ ಸಿನ್ಹ** : ನಿಲುವಳಿಯ ಕರಡು ಸಿದ್ಧಗೊಳಿಸುವಾಗ, ಎಲ್ಲ ಅಂಶಗಳನ್ನೂ ನಾವು ಗಮನಕ್ಕೆ ತಂದುಕೊಂಡಿದ್ದೆವು. ಈ ಅಧಿವೇಶನವನ್ನು ಮುಂದೆ ಮತ್ತೆ ಕರೆಯಲು ಸಂದರ್ಭ ಒದಗಿಬರುವ ಬಗ್ಗೆ ಯಾವುದನ್ನೂ ಉಲ್ಲೇಖಿಸಿದಂತೆ ನಿರ್ಧರಿಸಿದೆವು. ಮಾನ್ಯ ಕಾಮತ್ ಅವರು ತಮ್ಮ ತಿದ್ದುಪಡಿಯನ್ನು ಹಿಂಪಡೆಯುವಂತೆ ನಾನು ಅವರನ್ನು ಕೋರುತ್ತೇನೆ. ಈ ತಿದ್ದುಪಡಿಯನ್ನು ತರಬೇಕೆಂದು ಆಗ್ರಹ ಪಡಿಸುವುದರಿಂದ ಯಾವುದೇ ಉದ್ದೇಶ ಈಡೇರಿದಂತಾಗುವುದಿಲ್ಲ.

**ಮಾನ್ಯ ಎಂ.ವಿ. ಕಾಮತ್** : ಈಗಿರುವ ಪರಿಸ್ಥಿತಿಯಂತೆ.....

**ಗೌರವಾನ್ವಿತ ಸದಸ್ಯರು** : ಸಾಕು ಸಾಕು.

**ಮಾನ್ಯ ಎಂ.ವಿ. ಕಾಮತ್** : ನಾನು ತಿದ್ದುಪಡಿಯನ್ನು ಹಿಂಪಡೆಯುತ್ತಿದ್ದೇನೆ.

**ಸನ್ಮಾನ್ಯ ಅಧ್ಯಕ್ಷರು** : ನಾನು ನಿಲುವಳಿಯನ್ನು ಮತಕ್ಕೆ ಹಾಕುತ್ತೇನೆ.

ನಿಲುವಳಿ ಅಂಗೀಕೃತವಾಯಿತು.

## ಉಪಾಧ್ಯಕ್ಷರಿಗೆ ಅಭಿನಂದನೆ

**ಸನ್ಮಾನ್ಯ ಅಧ್ಯಕ್ಷರು** : ಇಲ್ಲಿಗೆ ಇಂದಿನ ವ್ಯವಹಾರಗಳು ಮುಕ್ತಾಯವಾಗುತ್ತವೆ. ಕೆಲವು ಮಿತ್ರದಿಂದ ಒಂದು ಸಲಹೆ ಬಂದಿದೆ. ಡಾ। ಮುಖರ್ಜಿಯವರು ಉಪಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಅವರನ್ನು ಅಭಿನಂದಿಸಲು ಸಭೆಗೆ ಒಂದು ಅವಕಾಶ ಕೊಡಬೇಕೆಂಬ ಸಲಹೆ. ಮಿಕ್ಕವರು ಅಭಿನಂದಿಸುವ ಮೊದಲು ನಾನು ಅವರಿಗೆ ಅಭಿನಂದನೆ ಸಲ್ಲಿಸಲು ಇಚ್ಛಿಸುತ್ತೇನೆ. ಬೇರೆ ಯಾರಾದರೂ ಮಾತನಾಡಲು ಬಯಸುತ್ತಾರಾ?

**ರೆವೆರೆಂಡ್ ಜೆರೋಮ್ ಡಿ'ಸೋಜಾ** (ಮದ್ರಾಸ್ : ಸಾಮಾನ್ಯ) : ಸನ್ಮಾನ್ಯ ಅಧ್ಯಕ್ಷರೆ ಡಾ। ಎಚ್.ಸಿ. ಮುಖರ್ಜಿಯವರನ್ನು ಅಭಿನಂದಿಸಲು ಅಪಾರ ಸಂತೋಷವಾಗುತ್ತದೆ. ಆ ಮೂಲಕ ಈ ಗೌರವಾನ್ವಿತ ಸಭೆಯ ಸಂವೇದನೆಗಳಿಗೆ ನಾನು ದನಿಗೂಡಿಸಿದಂತಾಗುತ್ತದೆ ಎಂದು ನಂಬುತ್ತೇನೆ. ಈ ಬೃಹತ್ ಸಭೆಯ ಉಪಾಧ್ಯಕ್ಷರಾಗಿ ಚುನಾಯಿತರಾಗಿರುವ ಡಾ। ಎಚ್.ಸಿ. ಮುಖರ್ಜಿಯವರು ಖಂಡಿತ ಅಭಿನಂದನಾರ್ಹರು. ಡಾ। ಮುಖರ್ಜಿಯವರು ನಮ್ಮ ರಾಷ್ಟ್ರದ ಎಲ್ಲ ಕೋಮುಗಳ, ಎಲ್ಲ ವರ್ಗಗಳ ಸದ್ಭಾವನೆಗೆ ಪಾತ್ರರಾಗಿದ್ದಾರೆ. ಬಂಗಾಳದಲ್ಲಿ ಅವರು ಶಿಕ್ಷಕರಾಗಿ ಶ್ಲಾಘ್ಯ ಸೇವೆಯಲ್ಲಿ ತಮ್ಮನ್ನು ನಿಕಟವಾಗಿ ತೊಡಗಿಸಿಕೊಂಡಿದ್ದಾರೆ. ಅವರು ಕ್ರೈಸ್ತ ಪಂಗಡವೊಂದಕ್ಕೆ ಸೇರಿದ್ದು, ಇತರ ಕ್ರೈಸ್ತ ಪಂಗಡಗಳೊಡನೆ, ಬೆರೆತು ಸ್ಮರಣೀಯ ಯೋಗದಾನ ನೀಡಿದ್ದಾರೆ. ಅವರ ನ್ಯಾಯಪರತೆ, ದೇಶಭಕ್ತಿ, ಸ್ನೇಹಭಾವ ಹಾಗೂ ಹೊಂದಿಕೊಂಡು ಹೋಗುವ ಗುಣವನ್ನು ಎಲ್ಲರೂ ಬಲ್ಲರು. ಈ ಸಭೆಯ ವ್ಯವಹಾರಗಳನ್ನು ನಿರ್ದೇಶಿಸುವ ಅವಕಾಶ ಸಿಕ್ಕರೆ–ಉಜ್ವಲವಾಗಿ ಎನ್ನಲಾರೆ–ತಾವು ಹಾಕಿಕೊಟ್ಟ ಪರಂಪರೆಗೆ ಅನುಗುಣವಾಗಿ ನಿರ್ವಹಿಸುತ್ತಾರೆಂಬ ಭರವಸೆ ನನಗಿದೆ. ಈ ವಿಷಯವಾಗಿ ಸಭೆಯ ವೇಳೆಯನ್ನು ಇನ್ನಷ್ಟು ಬಳಸಲಾರೆ. ಮತ್ತೊಮ್ಮೆ ಡಾ। ಮುಖರ್ಜಿಯವರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು. ಅವರು ತಮ್ಮ ಕಾರ್ಯದಲ್ಲಿ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

**ಶ್ರೀ ವಿಶ್ವನಾಥ್ ದಾಸ್** (ಒರಿಸ್ಸ : ಸಾಮಾನ್ಯ) : ಡಾ। ಎಚ್.ಸಿ. ಮುಖರ್ಜಿಯವರು ಸಂವಿಧಾನ ರಚನಾಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ಚುನಾಯಿತರಾಗಿರುವ ಈ ಸಂದರ್ಭದಲ್ಲಿ ಅವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಡಾ। ಮುಖರ್ಜಿಯವರು ಆ ಸ್ಥಾನಕ್ಕೆ ಅತ್ಯಂತ ಯೋಗ್ಯರು. ಅವರ ಆಯ್ಕೆಯಿಂದ, ಬಹುಸಂಖ್ಯಾತರ ಬಗ್ಗೆ ಅಲ್ಪಸಂಖ್ಯಾತರಿಗೆ ಯಾವ ಭಯ ಆತಂಕವೂ ಇರುವ ಅಗತ್ಯವಿಲ್ಲವೆಂಬುದು ಸಾಬೀತಾಗುತ್ತದೆ. ಅವರ ಆಯ್ಕೆ ಅಲ್ಪಸಂಖ್ಯಾತರಿಗೂ, ಬಂಗಾಳ ಪ್ರಾಂತ್ಯಕ್ಕೂ ಸಂದ ಗೌರವ. ಅವರನ್ನು ಜಾತೀಯತೆಯತ್ತ ಎಳೆದೊಯ್ಯುವ ಹಲವಾರು ಯತ್ನಗಳು ನಡೆದಿರುವುದು ನನಗೆ ಗೊತ್ತಿದೆ. ಅವೆಲ್ಲವನ್ನೂ ಅವರು ಯಶಸ್ವಿಯಾಗಿ ತಡೆಯುತ್ತಲೆ ಬಂದಿದ್ದಾರೆ. ಅವರು ಒಳ್ಳೆಯ ಪರಂಪರೆಯ ಪ್ರವರ್ತಕರಾಗಿ, ತಮ್ಮ ಸ್ಥಾನದಲ್ಲಿ ಯಶಸ್ಸು ಪಡೆಯುವರೆಂಬುದರಲ್ಲಿ ನನಗೆ ಕಿಂಚಿತ್ತೂ ಸಂಶಯವಿಲ್ಲ. ನಮ್ಮಿಂದ ಅವರಿಗೆ ಎಲ್ಲ ಸಹಕಾರವೂ ದೊರೆಯತ್ತದೆ. ಅವರಿಗೆ ಶುಭವಾಗಲಿ.

**ಮಾನ್ಯ ಎಚ್.ಜೆ. ಖಾಂಡೇಕರ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ). *[ಸನ್ಮಾನ್ಯ ಅಧ್ಯಕ್ಷರೆ, ನಾನು ಡಾ। ಮುಖರ್ಜಿಯವರನ್ನು ಅಭಿನಂದಿಸುತ್ತೇನೆ. ಇಂದು ಹರಿಜನರೆಂದು ಗುರುತಿಸಿಕೊಂಡ ಕೋಮಿಗೆ ಸೇರಿದವನು ನಾನು. ಅವರು ಭಾರತದಲ್ಲಿ ೬೦ ದಶಲಕ್ಷ ಜನರಿದ್ದಾರೆ. ಈ ಕೋಮಿನವರ ಪರವಾಗಿ ನಾನು ಡಾ। ಮುಖರ್ಜಿಯವರನ್ನು ಅಭಿನಂದಿಸುತ್ತೇನೆ. ಸಭೆಯ ಕಾರ್ಯಕಲಾಪಗಳಲ್ಲಿ ಅವರು ಬಹಳಷ್ಟು ಸಹಕರಿಸುವರೆಂದು ನಂಬಿದ್ದೇನೆ. ಎಲ್ಲ ಸಮಸ್ಯೆಗಳನ್ನು ಬಗೆಹರಿಸುವರೆಂದುಕೊಂಡಿದ್ದೇನೆ. ಈ ಮಾತುಗಳನ್ನು ಹೇಳಿ ನಾನು ವಿರಮಿಸುತ್ತೇನೆ]*

**ಡಾ। ಜೋಸೆಫ್ ಆಲ್‌ಬನ್ ಡಿ'ಸೋಜಾ** (ಬಾಂಬೆ : ಸಾಮಾನ್ಯ) : ನನ್ನ ಮಿತ್ರ ರೆವೆರೆಂಡ್ ಜೆಕೋಮ್ ಡಿಸೋಜಾ ಅವರಾಡಿದ ಪ್ರತಿಯೊಂದು ನುಡಿಯನ್ನು ನಾನು ಅನುಮೋದಿಸುತ್ತೇನೆ. ಈ ಬೃಹತ್ ಸಭೆಗೆ ಚುನಾಯಿತರಾಗಬೇಕಿರುವ ಐವರು ಉಪಾಧ್ಯಕ್ಷರಲ್ಲಿ, ಡಾ। ಮುಖರ್ಜಿಯವರೇ ಮೊದಲಿಗರು, ತಮ್ಮ ಕ್ಷಮೆ ಕೋರಿ, ಈ ಮಹಾನ್ ರಾಷ್ಟ್ರದ ಭಾರತೀಯ ಕ್ರೈಸ್ತ ಸಮುದಾಯಕ್ಕೆ ನನ್ನಂತೆ ಈಗ ಅವರೂ ಸೇರಿದವರೆಂದು ತಿಳಿಸಲು ಬಯಸುತ್ತೇನೆ. ಅವರ ಆಯ್ಕೆ ಭಾರತೀಯರ ಕ್ರೈಸ್ತ ಸಮುದಾಯಕ್ಕೆ ಸಂದ ಗೌರವವೆಂದು ಭಾವಿಸುತ್ತೇನೆ.

ಸರ್, ಸಲಹಾ ಸಮಿತಿಯಲ್ಲಿ ಭಾರತೀಯ ಕ್ರೈಸ್ತ ಸಮಿತಿಯ ಪ್ರಾತಿನಿಧ್ಯದ ಬಗ್ಗೆ ಪ್ರಸ್ತಾಪಿಸಬಹುದೆ? ಆ ಸಮುದಾಯದಿಂದ ನಮಗೆ ಸಾಕಷ್ಟು ಪ್ರಾತಿನಿಧ್ಯ ಸಿಕ್ಕಿದೆ. ಆ ಸಮುದಾಯಕ್ಕೆ ಅಗತ್ಯವಿರುವ ಎಲ್ಲ ಸಹಕಾರವನ್ನೂ ಡಾ। ಮುಖರ್ಜಿಯವರು ನೀಡುವರೆಂದು ನಾನು ನಿರೀಕ್ಷಿಸುತ್ತೇನೆ. ಈ ಮಹಾನ್ ದೇಶದ

ಸಮಗ್ರ ಭಾರತೀಯ ಕ್ರೈಸ್ತ ಸಮುದಾಯದ ಎಲ್ಲ ವ್ಯವಹಾರಗಳಲ್ಲೂ ತಮ್ಮ ಸಮರ್ಥ ಸಹಕಾರ ನೀಡಿ, ಅವರನ್ನು ತೃಪ್ತಿ ಪಡಿಸುವರೆಂದು ಅಂದುಕೊಂಡಿದ್ದೇನೆ. ಫಾದರ್‌ಜೆರೋಂ ಅವರು ಈಗಾಗಲೆ ತಿಳಿಸಿದಂತೆ, ಅವರ ಅಗತ್ಯತೆ ಬಹಳಷ್ಟೆ ಇದೆ. ಬಂಗಾಲ ಪ್ರಾಂತ್ಯದಲ್ಲಿ, ರಾಜನೈತಿಕ ಸೈಪುಣ್ಯವನ್ನು ಮೆರೆದು, ಭಾರತದ ಈ ಭಾಗದ ದಾರಿದೀಪವಾಗಿ ಬೆಳಗಿದ್ದಾರೆ.

ಸರ್, ಅವರು ಒಂದಲ್ಲೊಂದು ದಿನ ಈ ಸಭೆಯ ಅಧ್ಯಕ್ಷತೆ ವಹಿಸುವ ಸಾಧ್ಯತೆ ಇದೆ. ಫಾದರ್ ಜೆರೋಂ ಅವರು ಹೇಳಿದಂತೆ, ತಾವು ತಮ್ಮ ಸಭಾಧ್ಯಕ್ಷತೆ ಅವಧಿಯಲ್ಲಿ ಸಭೆಗೆ ಗೌರವ ತಂದಂತೆ ಅವರೂ ತಮ್ಮ ಕರ್ತವ್ಯ ನಿಷ್ಠೆಯನ್ನು ಮೆರೆದು ಸಭೆಯ ಗೌರವಕ್ಕೆ ಪಾತ್ರರಾಗುತ್ತಾರೆ. ನಾನು ಅವರನ್ನು ಅಭಿನಂದಿಸುತ್ತೇನೆ. ತನ್ಮೂಲಕ, ಭಾರತೀಯ ಕ್ರೈಸ್ತ ಸಮುದಾಯಕ್ಕೆ ಸಂದ ಗೌರವಕ್ಕಾಗಿ ಆ ಸಮುದಾಯವನ್ನು ಅಭಿನಂದಿಸುತ್ತೇನೆ.

**ಮಾನ್ಯ ಎಚ್.ಸಿ. ಮುಖರ್ಜಿ** (ಬಂಗಾಳ : ಸಾಮಾನ್ಯ) : ಸನ್ಮಾನ್ಯ ಅಧ್ಯಕ್ಷರೆ, ಮಹಿಳೆಯರೆ ಮತ್ತು ಮಹನೀಯರೆ! ನಾನು ತಮ್ಮಲ್ಲಿ ಪೂರ್ವಭಾವಿಯಾಗಿ ಕ್ಷಮೆ ಬೇಡುತ್ತೇವೆ. ಕ್ರೈಸ್ತ ಜಾತೀಯವಾದಿಯಾಗಿ ಪ್ರಾರಂಭಿಸಿ, ಕ್ರೈಸ್ತ ಭಾರತೀಯ ರಾಷ್ಟ್ರವಾದಿಯಾಗಿ ರೂಪುಗೊಂಡ ನನ್ನ ಇತಿಹಾಸವನ್ನು ತಮ್ಮ ಮುಂದಿಡುತ್ತಿದ್ದೇನೆ. ನಾನು ರಾಜಕೀಯಕ್ಕೆ ಕಾಲಿಟ್ಟಿದ್ದು ಕೇವಲ ಆಕಸ್ಮಿಕ. ಅದೊಂದು ಛಿದ್ದು; ಬೇರೇನೂ ಅಲ್ಲ. ಕೆಲವರು ನನ್ನನ್ನು ಚುನಾವಣೆಗೆ ನಿಲ್ಲುವಂತೆ ಒತ್ತಾಯ ಪಡಿಸುತ್ತಿದ್ದರು; ಕೊನೆಯ ಘಳಿಗೆಯಲ್ಲಿ ಕೈಕೊಟ್ಟರು. ನಾನು, ಮೊದಲಿನಿಂದಲೂ, ಶಾಲಾಮಾಸ್ತರನಾಗಿಯೇ ಬದುಕು ಕಳೆದಿದ್ದೇನೆ. ಬೆದರಿಕೆಯೊಡ್ಡಿ ಹಣ ವಸೂಲಿ ಮಾಡುವವನಿಗಿಂತ ಒಬ್ಬ ಶಾಲಾ ಉಪಾಧ್ಯಾಯ ಮೇಲೆಂಬುದನ್ನು ನಾನು ತೋರಿಸಿ ಕೊಡಬೇಕಿತ್ತು. ಅದು ಹೇಗಾಯಿತೆಂದರೆ. ನಾನು ಯಾರ ವಿರುದ್ಧ ಚುನಾವಣೆಗೆ ಸ್ಪರ್ಧಿಸಿದ್ದೇನೋ, ಅವರು ನನಗಿಂತಲು ಹೆಚ್ಚಾಗಿ ನನ್ನ ಸಮುದಾಯದ ಸೇವೆಯನ್ನು ಹಿಂದಿನಿಂದಲೂ ಮಾಡುತ್ತ ಬಂದಿದ್ದ ಅನುಭವಿ ಸ್ಪರ್ಧಿಯಾಗಿದ್ದರು. ಆಗಿನ ದಿನಗಳಲ್ಲಿ ರಾಷ್ಟ್ರೀಯ ಭಾವನೆಗಳಿಗಿಂತ ಜಾತೀಯ ಭಾವನೆಗಳಿಗೆ ಜನರು ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದ್ದರು. ಈ ಅಂಶವನ್ನು ಕುರಿತು ಅತೀವ ನಾಚಿಕೆಯಿಂದ ನಾನು ಆಲೋಚಿಸಲು ತೊಡಗಿದ್ದೆ. ಅವರು ಜಾತೀಯ ಮನೋಭಾವಕ್ಕೆ ಸೊಪ್ಪು ಹಾಕಿದರು. ನಾನು ಅವರಿಗಿಂತಲೂ ಮಿಗಿಲಾಗಿ ಜಾತೀಯ ಮನೋಭಾವದ ಉರಿಗೆ ಗಾಳಿ ಹಾಕಿದೆ. ಹಾಗೆ ನಾನು ರಾಜಕೀಯಕ್ಕಿಳಿದೆ. ಭಾರತೀಯ ಕ್ರೈಸ್ತರ ಅಖಿಲ ಭಾರತ ಮಂಡಳಿಯ ಅಧ್ಯಕ್ಷನಾದಾಗ, ಅದರ ಸದಸ್ಯರು ಬಡ ಕ್ರೈಸ್ತರ ಕುಟುಂಬಗಳನ್ನು ಕಂಡು ಬರಬೇಕೆಂದು ಸಲಹೆ ಮಾಡಿದರು. ಆಗ ಮತ್ತು ಆಗಷ್ಟೆ ಬಡ ಭಾರತೀಯ ಮುಸ್ಲಿಮ್ ಆಗಲಿ, ಬವಣೆಗೆ ತುತ್ತಾದವರೆಂದು ಅರಿವಾದದ್ದು. ನಂತರವೇ, ನಾನು ಜಾತೀಯವಾದಿಯಿಂದ ರಾಷ್ಟ್ರೀಯವಾದಿಯಾಗಿ ಪರಿವರ್ತನೆಗೊಂಡಿದ್ದು. ಇಂದು ನೀವು ನನ್ನನ್ನು ಸಭೆಯ ಉಪಾಧ್ಯಕ್ಷನನ್ನಾಗಿ ಆರಿಸಿರುವಿರಾದರೆ, ನಾನು ಈ ಸ್ಥಾನದಲ್ಲಿ ಕೇವಲ ರಾಷ್ಟ್ರವಾದಿಯಾಗಿ ನನ್ನ ಕರ್ತವ್ಯ ನಿಭಾಯಿಸುತ್ತೇನೆಯೆ ಹೊರತು ಜಾತೀಯವಾದಿಯಾಗಿ ಅಲ್ಲವೆಂದು ನಿಮಗೆ ಖಚಿತ ಪಡಿಸುತ್ತೇನೆ. ನನ್ನ ದೇಶದ ಬಡಜನತೆಗಾಗಿ ನನ್ನ ಕರ್ತವ್ಯವೇನಿದೆಯೋ ಅದನ್ನು ಪಾಲಿಸುತ್ತೇನೆ. ಅದು ನನ್ನ ನೆನಪಿನಲ್ಲಿ ಉಳಿಯುತ್ತದೆ. ನಾನು ವಕೀಲನಲ್ಲ. ರಾಜಕಾರಣಿಯೂ ಅಲ್ಲ. ನನ್ನ ಬದುಕಿನಲ್ಲಿ ಶಿಕ್ಷಕನಾಗಿ ಯಾ ವಿದ್ಯಾರ್ಥಿಯಾಗಿ ೪೨ ವರುಷಗಳು ಕಳೆದಿವೆ. ನೀವು ನನಗೆ ವಹಿಸಿಕೊಟ್ಟಿರುವ ಕರ್ತವ್ಯವನ್ನು ನಿಭಾಯಿಸಲು ನಾನು ಸಮರ್ಥನೋ ಅಲ್ಲವೋ ಎಂಬುದು ನನಗೆ ತಿಳಿಯದು. ನಾನಿಷ್ಟನ್ನು ಮಾತ್ರ ಬಲ್ಲೆ, ಕೊಟ್ಟ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಬಲ್ಲೆ. ತನ್ಮೂಲಕ ಸದನದ ಘನತೆಯನ್ನು ಕಾಪಾಡುತ್ತೇನೆ. ನನ್ನ ಕೋಮಿನ ಖ್ಯಾತಿಯನ್ನು ಬಲ ಪಡಿಸುತ್ತೇವೆ. ಇಲ್ಲಿಯವರೆಗೆ ಅದು ಒಂದು ವಿಶಿಷ್ಟ ಗುಣವನ್ನು ಹೊತ್ತು ತಂದಿದೆ. ಅದೆಂದರೆ, ನನ್ನ ಕೋಮು ನೇರವಾಗಿಯೋ, ಪರೋಕ್ಷವಾಗಿಯೋ, ರಾಷ್ಟ್ರದ ರಾಜಕೀಯ ಬೆಳವಣಿಗೆಗೆ ವಿರುದ್ಧವಾಗಿ ನಿಂತಿಲ್ಲ [ಪ್ರಚಂಡ ಘೋಷಾನುಮೋದನೆ].

## ಅಧ್ಯಕ್ಷರಿಗೆ ಮಿ। ಎಸ್. ಲಹಿರಿಯವರ ಪತ್ರ

**ಮಾನ್ಯ ಎಚ್.ವಿ. ಕಾಮತ್** : ಸನ್ಮಾನ್ಯ ಅಧ್ಯಕ್ಷರೆ, ಈ ಸಭೆ ಮುಕ್ತಾಯವಾಗುವ ಮುನ್ನ, ತಮಗೆ, ನನ್ನ ಗೌರವಾನ್ವಿತ ಮಿತ್ರ ಮಾನ್ಯ ಸೋಮನಾಥ ಲಹಿರಿ ಅವರು ಬರೆದ ಪತ್ರದ ಪ್ರತಿಗಳು, ಹಲವಾರು ಸದಸ್ಯರ ಕೈ ಸೇರಿದೆ ಎಂಬುದನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ನಾವಿಲ್ಲಿ ಭಾರತೀಯ ಕಮ್ಯುನಿಸ್ಟ್ ಪಕ್ಷದ ಬಗ್ಗೆ ಚಿಂತಿಸುವುದಕ್ಕೆ ಸೇರಿಲ್ಲ. ಅದರ ಸಿದ್ಧಾಂತದೊಡನೆ, ನಮ್ಮಲ್ಲಿ ಬಹುತೇಕ ಭಿನ್ನಾಭಿಪ್ರಾಯವಿದೆ ಎಂದು ನಿವೇದಿಸುತ್ತೇನೆ.

**ಸರ್ದಾರ್ ಹರ್ನಾಮ್ ಸಿಂಗ್** : ಸರ್. ಇಲ್ಲೊಂದು ಕ್ರಿಯಾಲೋಪವಿದೆ. ಮಾನ್ಯ ಸತ್ಯನಾರಾಯಣ ಸಿನ್ಹ ಅವರು ಪ್ರಸ್ತಾವಿಸಿದಂತೆ. ಏಪ್ರಿಲ್ ತಿಂಗಳ ಅನಿಶ್ಚಿತ ದಿನಾಂಕದ ವರೆಗೆ ಸದನದ ಕಲಾಪಗಳನ್ನು ಮುಂದೂಡಲಾಗಿದ್ದು, ನಿಲುವಳಿ ಅಂಗೀಕೃತವಾಗಿದೆ. ಆ ಕಾರಣ ಬೇರಾವುದೇ ವಿಷಯವನ್ನು ಈಗ ಚರ್ಚಿಸುವಂತಿಲ್ಲ.

**ಸನ್ಮಾನ್ಯ ಅಧ್ಯಕ್ಷರು** : ಈ ಸದನದ ಗಮನಕ್ಕೆ ತರಬೇಕಾದ ಒಂದು ಸಂಗತಿಯನ್ನು ಪ್ರಸ್ತಾವಿಸಲು ನಾನು ಮಾನ್ಯ ಕಾಮತ್ ಅವರಿಗೆ ಅನುಮತಿ ನೀಡಿದ್ದೇನೆ. ಕೆಲವು ದಿನಗಳ ಹಿಂದೆ ಮಾನ್ಯ ಸೋಮನಾಥ ಲಹಿರಿಯವರಿಂದ ನನಗೊಂದು ಪತ್ರ ಬಂದಿತ್ತು. ಅದರಲ್ಲಿ, ಅವರದೆ ಒಂದು ಆರೋಪವಿತ್ತು. ಅವರ ಮನೆಯನ್ನು ಶೋಧಿಸಲಾಗಿತ್ತು. ಈ ಸಂವಿಧಾನ ರಚನಾಸಭೆಯ ನಡವಳಿಗಳನ್ನು ಕುರಿತ ಕಾಗದ ಪತ್ರಗಳು ಮತ್ತು ಅವರು ತಮ್ಮ ಭಾಷಣಕ್ಕೆಂದು ಸಿದ್ಧ ಪಡಿಸಿಕೊಂಡಿದ್ದ ಟಿಪ್ಪಣಿಗಳನ್ನು ಪೊಲೀಸರು ವಶ ಪಡಿಸಿಕೊಂಡಿದ್ದರು. ಅವರು ತಮ್ಮ ಪತ್ರದಲ್ಲಿ ಹಕ್ಕುಚ್ಯುತಿ ಪ್ರಶ್ನೆಯನ್ನು ಎತ್ತಿದ್ದರು. ಆ ಕ್ರಮ ಸಮರ್ಥನೀಯವೆ ಅಥವಾ ಅವರ ರಕ್ಷಣೆಗೆ ನಾನೇನಾದರೂ ಮಾಡಬಹುದೆ ಎಂದು ಕೇಳಿದ್ದರು. ಇದೇ ವಿಷಯವನ್ನು ಅವರೀಗ ಪ್ರಸ್ತಾಪಿಸಲು ಬಯಸಿದ್ದರು. ನಾನದಕ್ಕೆ ಅನುಮತಿ ನೀಡಿದ್ದೆ. ವಾಸ್ತವ ಸಂಗತಿಯೆಂದರೆ, ನಾನು ಆ ಪತ್ರವನ್ನು ಸಂವಿಧಾನ ಸಲಹಾಕಾರರಿಗೆ ರವಾನಿಸಿದ್ದೆ. ಏಕೆಂದರೆ, ಅದು ಕಾನೂನಿನ ಪ್ರಶ್ನೆಯಾಗುತ್ತದೆ. ಮತ್ತು ಅ ಪತ್ರ ನನ್ನ ಕೈ ಸೇರಿದ್ದು ಈ ಬೆಳಗ್ಗೆಯಷ್ಟೆ. ನಾನಿನ್ನೂ ಅದರ ಅಧ್ಯಯನ ಮಾಡಿಲ್ಲ. ಆದುದರಿಂದ ಅದರ ಬಗ್ಗೆ ಯಾವ ಕ್ರಮ ಕೈಗೊಳ್ಳಬೇಕೆಂಬುದನ್ನು ನಿರ್ಧರಿಸಲು ಸಾಧ್ಯವಾಗಿಲ್ಲ. ಆ ಪತ್ರವನ್ನು ಪರಿಶೀಲಿಸಿ, ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ಸಾಧ್ಯವೆ ಎಂಬುದನ್ನು ಆಲೋಚಿಸುತ್ತೇನೆ. ಅದರಂತೆ ಕ್ರಮ ಕೈಗೊಳ್ಳುತ್ತೇನೆ. ನನಗೆ ಅಧಿಕಾರ ಇಲ್ಲದಿದ್ದರೆ, ಈ ವಿಷಯವನ್ನು ಇಲ್ಲಿಗೆ ಬಿಡುತ್ತೇನೆ.

**ಮಾನ್ಯ ಸೋಮನಾಥ ಲಹಿರಿ** (ಬಂಗಾಳ : ಸಾಮಾನ್ಯ) : ಸರ್, ತಾವು ಈ ಸಭೆಯ ಅಧ್ಯಕ್ಷರು ಮಾತ್ರವಲ್ಲ, ಮಧ್ಯಾಂತರ ಸರ್ಕಾರದ ಸದಸ್ಯರೂ ಕೂಡ ಎಂಬುದನ್ನು ತಮಗೆ ನೆನಪು ಮಾಡುತ್ತಿದ್ದೇನೆ.

**ಸನ್ಮಾನ್ಯ ಅಧ್ಯಕ್ಷರು** : ಈ ಸದನದಲ್ಲಿ ನಾನು ಬೇರೇನೂ ಅಲ್ಲ. ಸದನದ ಕಲಾಪಗಳನ್ನು, ಏಪ್ರಿಲ್ ತಿಂಗಳಿಗೆ ಮುಂದೂಡಲಾಗಿದೆ.

ದಿನಾಂಕವನ್ನು ನಾನು ನಂತರ ಗೊತ್ತು ಪಡಿಸುತ್ತೇನೆ. ನಂತರ ಸದನವು ಮುಂದಿನ ಏಪ್ರಿಲ್ ತಿಂಗಳು, ಅಧ್ಯಕ್ಷರು ನಿಗದಿ ಪಡಿಸುವ ತಾರೀಖಿನವರೆಗೆ ಮುಂದೂಡಲ್ಪಟ್ಟಿತು.

*[ಹಿಂದೂಸ್ತಾನಿ ಭಾಷೆಯ ಭಾಷಣದ ಆಂಗ್ಲ ಭಾಷಾಂತರ]